# ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ..

ಕನ್ನಡ ವಾರಪತ್ರಿಕೆ


**ಸುಭಾಷಿತ:**

ಉಪಕಾರಿಸಿದವರನ್ನ ಎಂದೆಂದಿಗೂ ಮರೆಯಬೇಡ..
ಅಪಕಾರಿಸಿದವರನ್ನ ಯಾವತ್ತಿಗೂ ನೆನೆಯಬೇಡ..
ಉಂಡು ತಿಂದು ತೇಗಿದವರ ಹತ್ತಿರ ಸುಳಿಯಬೇಡ..
ಶ್ರೀಮಂತರ ಸಂಗಬೇಡ.. ಬಡವರ ಸಲಿಗೆ ಬೇಡ..
ಜನರಿಂದ ದೋಚಿ ದೇವರಿಗೆ ಅರ್ಪಣೆ ಮಾಡಬೇಡ..
ನಾನು ನನ್ನದು ಎಂಬ ಅಹಂಕಾರ ಬೇಡವೆ ಬೇಡ..
ನೀ ಬಂದ ಕಾರ್ಯವ ಮರೆತು ನಡೆಯಬೇಡ..
ಇನ್ನೊಬ್ಬರಿಂದ ನಿರೀಕ್ಷೆ ಇಟ್ಟು ಬದುಕಬೇಡ..
ಪರರಿಗೆ ನೆರವಾದರೆ ಅವರಿಂದ ಅಪೇಕ್ಷೆ ಪಡಬೇಡ..
ಕೊಡುವವನು ಕೊಳ್ಳುವವನು ಒಬ್ಬನೇ ಪರಮಾತ್ಮ...
**ಭಗವಾನ್ ಶ್ರೀಕೃಷ್ಣ**


PRGI No: KNKAN/25/A2498 www.karavalitharangini.com KARAVALI THARANGINI KANNADA Weekly Dakshina Kannada ದಿನಾಂಕ: 27-03-2026 to 02-04-2026 ಬೆಲೆ:10-00 ಸಂಪುಟ–1 ಸಂಚಿಕೆ–26 ಪುಟಗಳು–6





ರಾಮ ನವಮಿ ಹಬ್ಬದ

ಹಾರ್ದಿಕ

ಶುಭಾಶಯಗಳು

www.karavalitharangini.com

ಕರಾವಳಿ ತರಂಗಿಣಿ

ಮಂಗಳೂರು

ಕ್ಷಣ ಕ್ಷಣದ ಸುದ್ದಿಗಳಿಗಾಗಿ

ಕರಾವಳಿ ತರಂಗಿಣಿ

ಪತ್ರಿಕಾ ಬಳಗದಿಂದ

ಅಂತರ್ಜಾಲ ಮಾಧ್ಯಮ

www.karavalitharangini.com

ಕರಾವಳಿ ತರಂಗಿಣಿ

ಮಂಗಳೂರು





ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಹೆಣ್ಣುಮಕ್ಕಳ ಆರೋಗ್ಯ ರಕ್ಷಣೆಗಾಗಿ ಹಮ್ಮಿಕೊಂಡಿರುವ ಮಹತ್ವಾಕಾಂಕ್ಷೆಯ ಉಚಿತ ಹೆಚ್.ಪಿ.ವಿ. ಲಸಿಕಾ ಅಭಿಯಾನದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 22,473 ಕಿಶೋರಿಯರಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿದ್ದು, ಈಗಾಗಲೇ ರಾಜ್ಯಕ್ಕೆ 2.54 ಲಕ್ಷ ಡೋಸ್ ಲಸಿಕೆ ಉಚಿತವಾಗಿ ಸರಬರಾಜು ಆಗಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಈ ಲಸಿಕೆಗೆ ಸುಮಾರು 8,000 ರೂಪಾಯಿಗಳವರೆಗೆ ದರವಿದ್ದು, ಕೇಂದ್ರ ಸರ್ಕಾರದ ರಾಷ್ಟ್ರೀಯ ಆರೋಗ್ಯ ಮಿಷನ್ ಅಡಿಯಲ್ಲಿ ಇದನ್ನು ಉಚಿತವಾಗಿ ನೀಡಲಾಗುತ್ತಿದೆ. ಜಿಲ್ಲೆಯ ಎಲ್ಲಾ ಪ್ರಾಥಮಿಕ, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಮೇ ತಿಂಗಳಾಂತ್ಯದವರೆಗೆ ಈ ಲಸಿಕೀಕರಣ ಅಭಿಯಾನ ನಡೆಯಲಿದೆ. ಲಸಿಕೆ ಪಡೆಯಲು ಪೋಷಕರ ಒಪ್ಪಿಗೆ ಕಡ್ಡಾಯವಾಗಿರುತ್ತದೆ.

## ಹೋರ್ಮುಜ್ ಭಾರತಕ್ಕೆ ಮುಕ್ತ: ಕೊಂಚ ನಿರಾಳ



**ಮಂಗಳೂರು:** ಮಧ್ಯಪ್ರಾಚ್ಯದಲ್ಲಿ ಉಲ್ಬಣಗೊಂಡಿರುವ ಯುದ್ಧ ಪರಿಸ್ಥಿತಿಯ ನಡುವೆಯೇ, ಜಾಗತಿಕ ಇಂಧನ ಪೂರೈಕೆಯ ಜೀವನಾಡಿಯಾಗಿರುವ ಹೋರ್ಮುಜ್ ಜಲಸಂಧಿಯ ಕುರಿತು ಇರಾನ್ ಮಹತ್ವದ ಘೋಷಣೆ ಮಾಡಿದೆ. ಭಾರತ ಸೇರಿದಂತೆ ಐದು "ಸ್ನೇಹಪರ ರಾಷ್ಟ್ರಗಳ" ಹಡಗುಗಳ ಸಂಚಾರಕ್ಕೆ ಈ ಜಲಸಂಧಿಯನ್ನು ಮುಕ್ತಗೊಳಿಸಿರುವುದಾಗಿ ಇರಾನ್ ವಿದೇಶಾಂಗ ಸಚಿವ ಸಯ್ಯದ್ ಅಬ್ಬಾಸ್ ಅಧಿಕೃತವಾಗಿ ತಿಳಿಸಿದ್ದಾರೆ. ಈ ನಿರ್ಧಾರವು ಭಾರತದಂತಹ ಇಂಧನ ಆಮದುದಾರ ದೇಶಗಳಿಗೆ ದೊಡ್ಡ **3ನೇ ಪುಟಕ್ಕೆ**

## ಕರಾವಳಿಯಲ್ಲಿ ಮೀನುಗಾರರ ಬದುಕು ಸಂಕಷ್ಟದಲ್ಲಿ..

**ಮಂಗಳೂರು:** ಕರಾವಳಿಯ ಜೀವನಾಡಿಯಾಗಿರುವ ಮೀನುಗಾರಿಕಾ ಕ್ಷೇತ್ರವು ಈ ಬಾರಿ ಹಿಂದೆಂದೂ ಕಾಣದಂತಹ ಗಂಭೀರ ಬಿಕ್ಕಟ್ಟನ್ನು ಎದುರಿಸುತ್ತಿದೆ. ಪ್ರಸಕ್ತ ಮೀನುಗಾರಿಕಾ ಋತುವಿನಲ್ಲಿ ಇಂಧನ ದರಗಳ ನಿರಂತರ ಏರಿಕೆ ಮತ್ತು ಸಮುದ್ರದಲ್ಲಿ ಮೀನುಗಳ ಲಭ್ಯತೆ ಗಣನೀಯವಾಗಿ ಕುಸಿದಿರುವುದು ಮೀನುಗಾರರನ್ನು ಕಂಗೆಡಿಸುತ್ತಿದೆ. ಆಳ ಸಮುದ್ರಕ್ಕೆ ತೆರಳುವ ಬೋಟ್‌ಗಳಿಗೆ ಬೇಕಾದಷ್ಟು ಮೀನು ಸಿಗದಿರುವುದು ಮಾಲೀಕರಿಗೆ ಲಕ್ಷಾಂತರ ರೂಪಾಯಿಗಳ ನಷ್ಟವನ್ನು ತಂದೊಡ್ಡುತ್ತಿದೆ. ಇತ್ತೀಚಿನ ದಿನಗಳಲ್ಲಿ ಡೀಸೆಲ್ ದರ ಏರಿಕೆಯ ಜೊತೆಗೆ ವಾಣಿಜ್ಯ **3ನೇ ಪುಟಕ್ಕೆ**



## ಹುಣಸೆ ಹಣ್ಣಿಗೆ ಬಂದಿದೆ ಸುವರ್ಣಕಾಲ..

**ಬೆಂಗಳೂರು:** ರಾಜ್ಯದ ಕೃಷಿ ಮಾರುಕಟ್ಟೆಯಲ್ಲಿ ಈ ಬಾರಿ ಹುಣಸೆ ಹಣ್ಣು ಅಕ್ಷರಶಃ 'ಬಂಗಾರದ ಬೆಲೆ' ಪಡೆದುಕೊಂಡಿದ್ದು, ಬೆಳೆಗಾರರ ಮುಖದಲ್ಲಿ ಮಂದಹಾಸ ಮೂಡುವಂತೆ ಮಾಡಿದೆ. ಹಲವು ವರ್ಷಗಳಿಂದ ಸ್ಥಿರವಾಗಿದ್ದ ಅಥವಾ ಮಂದಗತಿಯಲ್ಲಿದ್ದ ಹುಣಸೆ ಹಣ್ಣಿನ ದರವು, ಪ್ರಸಕ್ತ ಸಾಲಿನಲ್ಲಿ ಅಭೂತಪೂರ್ವ ಏರಿಕೆ ಕಂಡಿದ್ದು, ಈ ಬೆಲೆ ಏರಿಕೆಯು ಕೃಷಿಕರ ಮುಖದಲ್ಲಿ ಮಂದಹಾಸ ಮೂಡಿಸಿದ್ದರೆ, ಸಾಮಾನ್ಯ ಗ್ರಾಹಕರ ಪಾಲಿಗೆ ಅಡುಗೆ ಮನೆಯ ಖರ್ಚು ಹೆಚ್ಚಾಗುವಂತೆ ಮಾಡಿದೆ. **3ನೇ ಪುಟಕ್ಕೆ**









# ಸಂಪಾದಕೀಯ

ಕರಾವಳಿ ತರಂಗಿಣಿ

## ಕೆಸರೊಳು ತಾವರೆ ಪುಟ್ಟಲು...

– ಲಲಿತಶ್ರೀ ಪ್ರೀತಮ್ ರೈ



ತಲ್ಲಣಿಸದಿರು ಕಂಡ್ಯ ತಾಳು ಮನವೆ ಎಲ್ಲರನು ಸಲಹುವನು ಇದಕೆ ಸಂಶಯಬೇಡ” ಈ ನುಡಿಮುತ್ತುಗಳಲ್ಲಿ ಅದೆಂತಹ ಮಧುರಾಮೃತವಿದೆಯಲ್ಲವೇ? ಜಗದ ಜಂಜಾಟದಲ್ಲಿ ಸ್ವಾರ್ಥ ಲಾಲಸೆಗಳಲ್ಲಿ ಮನಸ್ಸು ಬೆಂಡಾಗಿ ಸಾಕೆನ್ನುವ ಸಮಯದಲ್ಲಿ ನಮ್ಮನ್ನು ಕಾಯುವವನೊಬ್ಬನಿದ್ದಾನೆ ಎಂದರೆ ಆ ಹೊತ್ತಿಗೆ ಮನಸ್ಸು ತುಂಬಿ ಬರದೇ ಇರಲು ಸಾಧ್ಯವೇ? ನಾನು ನಾನೆಂದು ಮೆರೆಯುವ ಜನರೆದುರು ನಾವು ನಾವಾಗಿಯೇ ಬದುಕಿ ತೋರಿಸಬೇಕೆಂಬ ಹಂಬಲವಿದ್ದರೂ, ಅದು ಸಾಧ್ಯವಾಗದೇ ಒದ್ದಾಡುವ ಜನರು ಅದೆಷ್ಟಿಲ್ಲ ಈ ಭೂಮಿಯಲ್ಲಿ. ಅಂತಹ ಜನರಿಗಾಗಿಯೇ ನಮ್ಮ ಹಿರಿಯರು ಇಂತಹ ನುಡಿ ಮುತ್ತುಗಳ ಮೂಲಕ ಸಂತೈಸಿರಬೇಕು. ನಾನು, ನನ್ನದು ಎಂಬ ಅಭಿಮಾನಕ್ಕೆ ಕಾರಣವಾದುದೇ ಅಹಂಕಾರ. ದೇಹವೇ ನಾನೆಂಬ ಭಾವ ಇರುವವರೆಗೆ ಈ ಅಹಂಕಾರವು ನಮ್ಮಲ್ಲಿ ಮನೆಮಾಡಿಕೊಂಡಿರುತ್ತದೆ. ‘ಅಹಂಕಾರವೆಂಬ ಮದಗಜವೇರಿ ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ’ ಎಂದು ಬಸವಣ್ಣನವರು ಅಹಂಕಾರವನ್ನು ‘ಮದವೇರಿದ ಆನೆ ಇದ್ದ ಹಾಗೆ’ ಎನ್ನುತ್ತಾರೆ. ಅಹಂಕಾರದಲ್ಲಿ ಮೆರೆಯುವವರಿಗೆ ಎಂದೆಂದಿಗೂ ಮನಃಶಾಂತಿ ಇರಲಾರದು. ತಾನು ಸುಖವಾಗಿ ಇರುವೆ ನೆಂದು ಈ ಜಗಕ್ಕೆ ಕೂಗಿ ಹೇಳಿದರೂ, ಅವರು ಎಂದೆಂದಿಗೂ ಮನಸ್ಸಿನಲ್ಲಿ ದ್ವೇಷ, ಅಸೂಯೆ ಎನ್ನುವ ಕಿಚ್ಚನ್ನು ಹೊತ್ತು ತಿರುಗುತಿರುತ್ತಾರೆ. ಅಂತವರು ಅವರದೇ ಒಡಲಲ್ಲಿ ಬಚ್ಚಿಟ್ಟಿರುವ ಕಿಚ್ಚಿನ ಬೇಗೆ ಯಲ್ಲಿ ಬೆಂದು ನೊಂದಿರುವುದಂತು ಖಂಡಿತ. ಆದರೂ ನಾನು ಎನ್ನುವ ಅಹಂಕಾರ ಅವರನ್ನು ಸರಿ ದಾರಿಯಲ್ಲಿ ನಡೆಯಲು ಬಿಡುವುದಿಲ್ಲ. “ಆ ಬಿರುಗಾಳಿ ಹುಟ್ಟಲೊಡನೆ ಜ್ಞಾನಜ್ಯೋತಿ ಕೆಟ್ಟಿತ್ತು. ಜ್ಞಾನಜ್ಯೋತಿ ಕೆಡಲೊಡನೆ ನಾ ಬಲ್ಲೆ ಬಲ್ಲಿದರೆಂಬ ಅರುಹಿರಿಯರೆಲ್ಲರೂ ತಾಮಸಕ್ಕೊಳಗಾಗಿ ಸೀಮೆ ದಪ್ಪಿ ಕೆಟ್ಟರು ಕಾಣಾ ಗುಹೇಶ್ವರಾ’ ಎಂಬ ಅಲ್ಲಮಪ್ರಭುವಿನ ವಚನದಲ್ಲಿ ನಾನೆಂಬ ಅಹಂಕಾರದ ಬಗ್ಗೆ ತುಂಬಾ ಚೆನ್ನಾಗಿ ತಿಳಿಸಿದ್ದಾರೆ. ಅಹಂಕಾರವುಳ್ಳವರು ಆಸೆ-ಆಮಿಷ, ಕಾಮ-ಕ್ರೋಧ ಮತ್ತು ಮದ-ಮತ್ಸರಗಳಿಗೆ ಬಲಿಯಾಗಿ ತಮ್ಮ ವಿವೇಕವನ್ನೇ ಕಳೆದುಕೊಳ್ಳುತ್ತಾರೆ. ಮಹಾನ್ ಜ್ಞಾನಿಗಳೇ ಅಹಂಕಾರದಿಂದ ಅಧಃಪತನ ಹೊಂದಿರುವಾಗ ಸಾಮಾನ್ಯರ ಪಾಡಂತೂ ಹೇಳತೀರದು. ಅಹಂಕಾರದಲ್ಲಿ ಮೆರೆದ ರಾಜ ಮಹಾರಾಜರೇ ಮಣ್ಣಲ್ಲಿ ಮಣ್ಣಾಗಿರುವುದನ್ನು ನಾವು ಇತಿಹಾಸದಲ್ಲಿ ಓದಿದ್ದೇವೆ. ಇನ್ನು ಇನ್ನೊಬ್ಬರ ಬಗ್ಗೆ ಕಿಡಿಕಾರುತ್ತಾ, ಇನ್ನೊಬ್ಬರನ್ನು ಕೆಟ್ಟ ದೃಷ್ಟಿಯಲ್ಲೇ ನೋಡುವ ಈ ತೃಣ ಸಮಾನರಾದ ನಾವೆಲ್ಲಿ. ನಮ್ಮ ಅಮ್ಮ ಯಾವಾಗಲೂ ಒಂದು ಮಾತು ಹೇಳುತ್ತಿದ್ದರು “ಮರದ ಹುಳು ಯಾವಾಗಲೂ ಹೇಗೆ ಮರವನ್ನೇ ತಿನ್ನುತ್ತದೋ ಹಾಗೇ ಮನುಷ್ಯನಲ್ಲಿರುವ ಮದ ಮತ್ಸರಗಳು ಅವರನ್ನೇ ಹಾಳು ಮಾಡುವುದರಲ್ಲಿ ಸಂದೇಹವಿಲ್ಲ” ಅಂತ. ಅಹಂಕಾರವು ಮನಸ್ಸನ್ನು ಆವರಿಸಿದಾಗ ಭಗವಂತನು ನಮ್ಮ ಮನಸಿನಿಂದ ನಮಗರಿವಿಲ್ಲದಂತೆ ದೂರ ಹೋಗುತ್ತಾನೆ. ಅಹಂಕಾರವಿಲ್ಲದ ಶುದ್ಧ ಮನಸ್ಸು ತಾನೆ ಶಿವಲಿಂಗವೆನಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ. ಅಂತಹ ಶುದ್ಧ ಮನಸ್ಸಿನಲ್ಲಿ ಮಾತ್ರ ಭಗವಂತನು ನೆಲೆಯಾಗುವುದಕ್ಕೆ ಸಾಧ್ಯ. ಆದ್ದರಿಂದಲೇ ‘ಅಹಂಕಾರಿಯಾಗದೇ ಶರಣೆನ್ನು ಮನವೆ’ ಎಂದು ಬಸವಣ್ಣನವರು ಮನಸ್ಸಿಗೆ ತಿಳಿ ಹೇಳುತ್ತಾರೆ. ಇನ್ನು ಜಾತಿ, ಆಸ್ತಿ, ಅಂತಸ್ತುಗಳೆಂದು ಮೆರೆಯುವ ನಾವು ಸಾದಿಸಿದ್ದಾದರೂ ಏನನ್ನು? ದಿನವೆಲ್ಲಾ ಕೂಲಿ ಮಾಡಿ ದಣಿದು ಮಲಗುವ ಒಬ್ಬ ಕೂಲಿಯವನಿಗೆ ಬರುವ ನಿದ್ದೆಯ ಸುಖ, ಕೊಪ್ಪರಿಗೆ ಮೇಲೆ ಮಲಗುವ ಒಬ್ಬ ಶ್ರೀಮಂತನಿಗೆ ಸಿಗಲು ಸಾದ್ಯವೇ? ಇನ್ನು ಜಾತಿ ಜಾತಿ ಎಂದು ಬಡಿದುಕೊಳ್ಳು ಈ ಸಮಾಜದಲ್ಲಿ ಒಂದೊಂದು ಜಾತಿಯವರ ದೇಹದಲ್ಲಿ ಒಂದೊಂದು ರೀತಿಯ ರಕ್ತದ ಕಣವಿರಲು ಸಾದ್ಯವೇ? “ಕೆಸರೊಳು ತಾವರೆ ಪುಟ್ಟಲು, ಅದ ತಂದು ಬಿಸಜನಾಭನಿಗರ್ಪಿಸಲಿಲ್ಲವೇ? ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವು ವಸುಧೆಯೊಳಗೆ ಭೂಸುರರುಣಲಿಲ್ಲವೇ?”– ತಾವರೆ ಹೂವು ಹುಟ್ಟಿದ್ದು ಕೆಸರಲ್ಲಾದರೂ ದೇವರಿಗೆ ಮುಡಿಸುವುದಿಲ್ಲವೇ. ಹಸುವಿನ ಮಾಂಸದಿಂದಲೇ ಉತ್ಪತ್ತಿಯಾದ ಹಾಲನ್ನು ಅಮೃತಕ್ಕೆ ಸಮಾನವೆಂದು ಬಳಸುತ್ತಿಲ್ಲವೇ ಎಂದು ಕನಕದಾಸರು ಹೇಳುತ್ತಾರೆ. ಮನುಷ್ಯ ಈ ಲೋಕದಲ್ಲಿ ತಾನು ಕಂಡು, ಕೇಳಿ ಪಡೆದುಕೊಂಡಂತಹ ತಿಳುವಳಿಕೆಯ ಜೊತೆ ಜೊತೆಗೆ, ಮಾನವನ ಬದುಕಿನ ಆಗುಹೋಗುಗಳಿಗೆ ಕಾರಣವಾಗಿರುವ ವಾಸ್ತವದ ಸಂಗತಿಗಳನ್ನು ಅರಿತುಕೊಂಡು, ಒಳ್ಳೆಯ ನಡೆನುಡಿಗಳಿಂದ ಕೂಡಿದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಒಳ್ಳೆಯ ನಡೆ ನುಡಿಗಳು ಎಂದರೆ ತನಗೆ ತನ್ನವರಿಗೆ ಒಳಿತನ್ನು ಬಯಸುವಂತೆಯೇ ಜನಸಮುದಾಯಕ್ಕೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವಂತಹ ಸಾಮಾಜಿಕ ವರ್ತನೆ. ನಾನು ನನ್ನದೆಂಬ ಅಹಂಕಾರವನ್ನು ಬಿಟ್ಟು, ನಾವೆಲ್ಲರೂ ಒಂದೇ ಈ ಜಗದಲ್ಲಿ ಎನ್ನುವ ಸತ್ಯವನ್ನು ಅರಿತು ಬದುಕಿ ಮುಂದಿನ ಪೀಳಿಗೆಗೆ ದಾರಿ ದೀಪವಾಗವಾಗೋಣ...

# ಸಂಪ್ರದಾಯ

## ಡೊಳ್ಳು ಕುಣಿತ




ಜನಪದ ಕಲೆಗಳಲ್ಲಿ ಗಂಡುಕಲೆ ಎನಿಸಿರುವ ಡೊಳ್ಳು ಕುಣಿತ ಪುರುಷರಿಗೆ ಮಿಸಲಾದ ಕಲೆ. ಆದರೆ ಇಂದು ಮಹಿಳೆಯರು ಕೂಡ ಡೊಳ್ಳು ಕುಣಿತದಲ್ಲಿ ಬಾಗಿಯಾಗುತ್ತಿದ್ದಾರೆ. ಉತ್ತರ ಕರ್ನಾಟಕದ ಬಹುಪಾಲು ಜಿಲ್ಲೆಗಳು ಹಾಗೂ ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಪ್ರಚಲಿತವಿರುವ ಡೊಳ್ಳು ಕುಣಿತ ತನ್ನ ವಿಶಿಷ್ಟವಾದ ನೃತ್ಯ ಶೈಲಿಗಳಿಂದ ಉಳಿದುಕೊಂಡು ಬಂದಿದೆ. ಡೊಳ್ಳಿನ ಹಿಂದೆ ಒಂದು ಕತೆ ಇದೆ. ಡೊಳ್ಳಾಸುರನೆಂಬ ರಕ್ಕಸ ತಪಸ್ಸಿನಿಂದ ಪರಶಿವನನ್ನು ಮೆಚ್ಚಿಸಿ ಪರಶಿವನು ತನ್ನ ಹೊಟ್ಟೆಯಲ್ಲಿಯೆ ನೆಲೆಸಬೇಕೆಂದು ವರಪಡೆದ. ಅದರಂತೆ ಶಿವನು ಗಂಗೆ, ಗೌರಿಯನ್ನು ಆತ ತೊರೆದು ರಕ್ಕಸನ ಹೊಟ್ಟೆಯನ್ನು ಸೇರಿದ. ಶಿವನಿಲ್ಲದ ಕೈಲಾಸ ಕಳೆಗುಂದಿತು. ದುಃಖಿತರಾದ ಶಿವಗಣಗಳು ವಿಷ್ಣುವಿನ ಮೊರೆಹೊಕ್ಕರು ವಿಷ್ಣುವಿನ ರಹಸ್ಯ ನಿರ್ದೇಶನದಂತೆ ಪಂಚ ರಾತ್ರಿಗಳು ಸೇರುವುದು. ಶಿವನು ಕೋಪದಿಂದ ಕಣ್ಣು ತೆರೆದರೆ ಪ್ರಳಯವೆ ಉಂಟಾಗುವುದೆಂದು ಅರಿತ ವಿಷ್ಣು ಡೊಳ್ಳಾಸುರನ ಹೊಟ್ಟಯನ್ನೆ ವಾದ್ಯವಿಶೇಷವಾಗಿ ಮಾಡಿಕೊಂಡು ಅವನ ಮೂಳೆಗಳಿಂದ ಡೊಳ್ಳು ಬಾರಿಸಲು ಆರಂಬಿಸಿದ. ಶಿವನು ಆ ವಾದ್ಯದ ದನಿಗೆ ಮಾರು ಹೋಗಿ ಲಾಸ್ಯದಲ್ಲಿ ತೊಡಗಿದ. ಈ ವೇಳೆಗೆ ತೊಡೆಯ ಗೌರಿ, ಜೆಡೆಯ ಗಂಗೆಯರು ಬಂದು ಶಿವನನ್ನು ಸೇರಿದರು. ಶಿವ ಸುಪ್ರಿತನಾದ. ಮುಂದೆ ಡೊಳ್ಳು ಶಿವಸ್ತುತಿಯ ವಿಶೇಷ ವಾದ್ಯವಾಯಿತು. ಡೊಳ್ಳು ಮರ ಮತ್ತು ಚರ್ಮದಿಂದ ಮಾಡಿದ ಒಂದು ದೊಡ್ಡ ಆಕಾರದ ವಾದ್ಯ ಎನ್ನಬಹುದು. ತಾಳೆ ಅಥವಾ ಹಗುರವಾದ ಮರದಿಂದ ಎರಡುವರೆ ಇಂದ ಮೂರುವರೆ ಅಡಿ ಉದ್ದದ ಹಾಗೂ ಎರಡು ಅಡಿ ವ್ಯಾಸವಿರುವ ಪಿಪಾಯಿ ಆಕಾರದ ಡೊಳ್ಳನ್ನು ಸಿದ್ದಪಡಿಸಿರುತ್ತಾರೆ. ಇದರ ಎಡಬಾಗಕ್ಕೆ ಆಡಿನ ಚರ್ಮವನ್ನು ಬಲಬಾಕ್ಕೆ ಕುರಿಯ ಚರ್ಮವನ್ನು ಬಿಗಿಯಾಗಿ ಬಿಗಿಯುತ್ತಾರೆ. ಬಳಿಕ ಡೊಳ್ಳುನ್ನು ಬಡಿಯಲು ಬಳಸುವುದು ಸುಮಾರು ಒಂದುವರೆ ಅಡಿ ಉದ್ದದ ಬಿದಿರು ಕೋಲು. ಇದಕ್ಕೆ 'ಗಣಿ' ಎಂದು ಕರೆಯುತ್ತಾರೆ. ಡೊಳ್ಳು ಕುಣಿತದ ತಂಡದಲ್ಲಿ ಸಾಮಾನ್ಯವಾಗಿ ನಾಲ್ಕು ಜನರಿರುತ್ತಾರೆ ಕೆಲವು ಬಾರಿ ಇಷ್ಟೆ ಜನರಿರಬೇಕು ಎಂಬ ನಿಯಮವಿಲ್ಲ.

# ಕ್ಷೇತ್ರದರ್ಶನ

ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಹಲಗೂರು ಹೋಬಳಿಯಲ್ಲಿರುವ ಮುತ್ತತ್ತಿ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ಪ್ರಸಿದ್ದ ಯಾತ್ರಾ ಸ್ಥಳವಾಗಿದೆ. ಕಾವೇರಿ ನದಿಯ ಹರಿವಿನ ಸುಂದರ ಪ್ರಕೃತಿ ಸೌಂದರ್ಯದೊಂದಿಗೆ ಕಂಗೊಳಿಸುವ ಚಿಕ್ಕ ಗ್ರಾಮವೇ ಮುತ್ತತ್ತಿ. ರಮಣೀಯ ಕಣಿವೆ, ರಭಸದಿಂದ ಹರಿಯುವ ನೀರಿನ ಸೆಳವುಳ್ಳ ಸಣ್ಣ ಹಳ್ಳಗಳು ಇಲ್ಲಿವೆ. ಹಲವಾರು ಬಗೆಯ ಪ್ರಾಣಿ ಪಕ್ಷಿಗಳು ಈ ಅರಣ್ಯದಲ್ಲಿ ನೆಲೆಸಿವೆ. ಮುತ್ತತ್ತಿ ಪೌರಾಣಿಕ ಮಹಾಕಾವ್ಯವಾದ ರಾಮಾಯಣದಲ್ಲಿ ಬರುವ ಒಂದು ಪ್ರದೇಶವಾಗಿದೆ ಎಂಬ ಪ್ರತೀತಿ ಇದೆ. ಇಲ್ಲಿ ಪ್ರಸಿದ್ಧವಾದ ಹನುಮನ ಮಂದಿರವಿದ್ದು ಅದಕ್ಕೆ ಸ್ಥಳೀಯರು ಹನುಮಂತರಾಯ ಅಥವಾ ಮುತ್ತೆತ್ತರಾಯ ದೇವಸ್ಥಾನವೆಂದು ಕರೆಯುತ್ತಾರೆ. ಶ್ರೀ ಆಂಜನೇಯಸ್ವಾಮಿ ಮೂರ್ತಿಯು ಮುತ್ತತ್ತಿಯಲ್ಲಿ ಭೂಮಿಯಿಂದ ಮೂಡಿದ್ದು ಸದರಿ ಜಾಗದಲ್ಲಿ ಮೂಡಿರುವ ಮೂರ್ತಿಯನ್ನು ಭೂಮಿಯಲ್ಲೇ ಹೂತು ಹನುಮಂತನ ವಿಗ್ರಹವನ್ನು ಕೆತ್ತಿಸಿ




ಮುತ್ತೆತ್ತರಾಯ

ಪ್ರತಿಷ್ಠಾಪನೆ ಮಾಡಿ ಆ ಜಾಗದಲ್ಲಿ ದೇವಸ್ಥಾನವನ್ನು 1986–87ನೇ ಸಾಲಿನಲ್ಲಿ ಭಕ್ತಾಧಿಗಳ ವಂತಿಕೆಯಿಂದ ಹಣ ಕ್ರೂಢೀಕರಿಸಿ ದೇವಸ್ಥಾನವನ್ನು ನಿರ್ಮಿಸಲಾಗಿದೆ. ಪುರಾಣದ ಹಿನ್ನೆಲೆಯ ಪ್ರಕಾರ ರಾಮಾಯಣದ ಕಾಲದಲ್ಲಿ ಶ್ರೀರಾಮಚಂದ್ರಪ್ರಭು ಲಂಕಾಧಿಪತಿ ರಾವಣನನ್ನು ಕೊಂದು ವಿಭೀಷಣನಿಗೆ ಪಟ್ಟಕಟ್ಟಿ, ಶ್ರೀ ರಾಮಚಂದ್ರ, ಸೀತಾಮಾತೆ, ಲಕ್ಷ್ಮಣ ಮತ್ತು ಆಂಜನೇಯರ ಸಮೇತ ಲಂಕೆಯಿಂದ ಅಯೋಧ್ಯೆಗೆ ಹಿಂದಿರುಗಿ ಹೋಗುವಾಗ ಬಸವನ ಬೆಟ್ಟ ಅರಣ್ಯ ಪ್ರದೇಶದ ಪ್ರಕೃತಿ ಸೌಂದರ್ಯಕ್ಕೆ ಮನಸೋತು ಒಂದು ದಿನ ಇಲ್ಲೇ ತಂಗಿ ಹೋಗಲು ನಿರ್ಧರಿಸುತ್ತಾರೆ ಮರುದಿನ ಬೆಳಗ್ಗೆ ಕಾವೇರಿ ನದಿ ತೀರದಲ್ಲಿರುವ ಈಗಿನ ತಿರುಗಣೆ ಮಡುವಿನಲ್ಲಿ ಕುಳಿತು ತಾಯಿ ಸೀತಾದೇವಿ ಸ್ನಾನ ಮಾಡುತ್ತಿದ್ದಾಗ ಸೀತಾಮಾತೆಯ ಮುತ್ತಿನ ಮೂಗುತಿಯು ಕಾವೇರಿ ನದಿಯಲ್ಲಿ ಬಿದ್ದು ಹೋಗಿರುವುದಾಗಿ ತನ್ನ ಪತಿಯಾದ ಶ್ರೀ ರಾಮರಿಗೆ ಹೇಳಿದಾಗ ಅಲ್ಲೇ ಇದ್ದ ಹನುಮಂತನಿಗೆ ನೀರಿನಲ್ಲಿದ್ದ ಮೂಗುತಿಯನ್ನು ಹುಡುಕಲು ಶ್ರೀ ರಾಮಚಂದ್ರ ಪ್ರಭು ಹೇಳುತ್ತಾರೆ ಅವರ ಆಜ್ಞೆಯಂತೆ ಆಂಜನೇಯಸ್ವಾಮಿ ಅವರು ತನ್ನ ಬಾಲವನ್ನು ನೀರಿನಲ್ಲಿ ತಿರುಗಿಸಿ ನೀರಿನಲ್ಲಿ ಕಳೆದುಹೋಗಿದ್ದ ಮುತ್ತಿನ ಮೂಗುತಿ ಕಾಣಿಸಿದಾಗ ಮೂಗುತಿಯನ್ನು ತೆಗೆದು ಸೀತಾಮಾತೆಗೆ ನೀಡಿದನು. ಹನುಮಂತ ಬಾಲವನ್ನು ನೀರಿನಲ್ಲಿ ತಿರುಗಿಸಿದ ರಭಸಕ್ಕೆ ಆ ಜಾಗದಲ್ಲಿ ಇಂದಿಗೂ ಕಾವೇರಿ ನದಿಯ ನೀರು ಒಂದು ಸುತ್ತು ತಿರುಗಿ ಹೋಗುತ್ತದೆ. ಆದ ಕಾರಣ ಆ ಸ್ಥಳಕ್ಕೆ ತಿರುಗಣೆಮಡು ಎಂದು ಕರೆದು ಪ್ರಸಿದ್ದಿಯಾಗಿದೆ. ಹನುಮಂತನು ಸೀತಾಮಾತೆಗೆ ಮುತ್ತಿನ ಮೂಗುತಿಯನ್ನು ತನ್ನ ಬಾಲದಲ್ಲಿ ತೆಗೆದು ಕೊಟ್ಟಿರುವುದಕ್ಕೆ ತಾಯಿ ಸೀತಾದೇವಿ ಆಂಜನೇಯಸ್ವಾಮಿಯನ್ನು ಮುತ್ತೆತ್ತರಾಯನೆಂದು ಹೆಸರು ಕರೆದರು. ಹಾಗೆ ಆಂಜನೇಯಸ್ವಾಮಿಯನ್ನು ಈ ಕ್ಷೇತ್ರದಲ್ಲಿ ಮುತ್ತೆತ್ತರಾಯಸ್ವಾಮಿಯಾಗಿ ನೆಲೆಸು ಎಂದು ಹಾರೈಸುತ್ತಾರೆ. ಈಗ ಕ್ಷೇತ್ರವನ್ನು ಮುತ್ತತ್ತಿ ಎಂದು ಕರೆಯಲಾಗುತ್ತದೆ. ಶ್ರಾವಣ ಮಾಸದಲ್ಲಿ ನಡೆಯುವ ಮುತ್ತೆತ್ತರಾಯನ ಜಾತ್ರೆಯಲ್ಲಿ ಭಕ್ತರು ಸಹಸ್ರ ಸಂಖ್ಯೆಯಲ್ಲಿ ಸೇರುತ್ತಾರೆ.

# ವೈದ್ಯೋನಾರಾಯಣೋ ಹರಿಃ

## ಕವಟೆಕಾಯ್ಮರ




ಇದೊಂದು ಎಲೆಯುದುರುವ ಮರವಾಗಿದೆ. ಕಾಂಡದ ತೊಗಟೆಯು ಹರ್ಕಾಯ ಶಂಕುವಿನಾಕಾರದ ಮುಳ್ಳುಗಳನ್ನು ಹೊಂದಿದ್ದು ತೊಗಟೆ ಕಂದು ಬಣ್ಣದಲ್ಲಿರುತ್ತದೆ. ಎಲೆಯ ಕಿರು ಕೊಂಬೆಗಳು ದುಂಡಾಗಿದ್ದು, ವಾಯು ವಿನಿಮಯ ಬೆಂಡು ರಂಧ್ರಗಳ ಸಮೇತವಿದ್ದು ಮತ್ತು ರೋಮ ರಹಿತವಾಗಿರುತ್ತದೆ. ಇದರ ಬೀಜಗಳು ಗೋಳಾಕಾರದಲ್ಲಿದ್ದು, ನಯವಾದ ನೀಳಿ ಕಂದು ಬಣ್ಣದಲ್ಲಿರುತ್ತದೆ. ಇದರ ಹಣ್ಣು ರುಚಿ ಮತ್ತು ಸುವಾಸನೆಯನ್ನು ಹೊಂದಿರುತ್ತದೆ. ಮರ ಪಶ್ಚಿಮ ಘಟ್ಟಗಳ ಪರ್ವತ ಶ್ರೇಣಿಯಲ್ಲಿ ವ್ಯಾಪಕವಾಗಿ ಬೆಳೆಯುತ್ತದೆ. ಕೊಡಗಿನ ಜನರ ಆಹಾರದಲ್ಲಿ ಮಸಾಲೆಯಾಗಿ ಇದರ ತೊಗಟೆಯನ್ನು ಬಳಸಲಾಗುತ್ತದೆ. ಹಣ್ಣುಗಳ ಮತ್ತು ಚಿಗುರು ಎಲೆಗಳನ್ನು ಬೇಯಿಸಿ ತಿನ್ನಲಾಗುತ್ತದೆ. ಈ ಮರವು ಸುಣ್ಣ-ಮೆಣಸಿನ ಪರಿಮಳವನ್ನು ಹೊಂದಿರುತ್ತದೆ. ಹಣ್ಣುಗಳ ಸಿಪ್ಪೆ, ಬೀಜಗಳು, ಕಾಂಡದ ತೊಗಟೆ ಮತ್ತು ಬೇರುಗಳು ಹಾಗೂ ಹಣ್ಣುಗಳಿಂದ ಪಡೆಯಲಾದ ಎಣ್ಣೆ ಯನ್ನು ಔಷಧೀಯ ಉದ್ದೇಶಗಳಿಗಾಗಿ ಬಳಸಲಾಗುತ್ತದೆ. ಅಷ್ಟೇ ಅಲ್ಲದೆ ಔಷಧೀಯ ಗುಣಗಳನ್ನು ಹೊಂದಿರುವ ಈ ಮರದ ಎಲ್ಲಾ ಭಾಗಗಳನ್ನು ಮನೆ ಮದ್ದಿನಲ್ಲಿ ಬಳಸಲಾಗುತ್ತದೆ.

ತೊಗಟೆಯ ಕಷಾಯವನ್ನು ಎದೆಯ ನೋವಿನ ಚಿಕಿತ್ಸೆಯಲ್ಲಿ ಬಳಸಲಾಗುತ್ತದೆ.

ಹಣ್ಣುಗಳನ್ನು ಡಿಸ್ಪೆಪ್ಸಿಯಾ, ಅಸ್ತಮಾ ಮತ್ತು ಬ್ರಾಂಕೈಟಿಸ್, ಹೃದಯ ತೊಂದರೆಗಳು, ಹಲ್ಲು ನೋವು ಮತ್ತು ಸಂಧಿವಾತಗಳ ಚಿಕಿತ್ಸೆಗೆ ಬಳಸಲಾಗುತ್ತದೆ.

ಹೊಟ್ಟೆ ನೋವುಗಳಿಗೆ ಪರಿಹಾರವಾಗಿ ಬಾಹ್ಯವಾಗಿ ಬಳಸಲಾಗುತ್ತದೆ.

ಹಣ್ಣಿನ ರಸವನ್ನು ಉತ್ತೇಜಕ ಮತ್ತು ಜೀರ್ಣಕಾರಿ ಗುಣಲಕ್ಷಣಗಳನ್ನು ಹೊಂದಿದೆ.

ಎದೆ ನೋವುಗಳಿಗೆ ಇದರ ಕಷಾಯವನ್ನು ಬಳಸಲಾಗುತ್ತದೆ.

ಗೋವಾದಲ್ಲಿ ಮೂತ್ರಪಿಂಡಗಳಿಗೆ ಶುದ್ಧೀಕರಿಸಲು ಮೂಲ ತೊಗಟೆಯನ್ನು ಬಳಸಲಾಗುತ್ತದೆ.

ಕಾಲರಾಗೆ ಅಗತ್ಯ ಎಣ್ಣೆ ಅಲ್ಲದೆ ನಂಜುನಿರೋಧಕ ಅಥವಾ ಸೋಂಕು ನಿವಾರಕವನ್ನಾಗಿ ಬಳಸಲಾಗುತ್ತದೆ.

ಅರುಣಾಚಲ ಪ್ರದೇಶದ ಕಣಿವೆಯ ಆದಿಬುಡಕಟ್ಟುಗಳು ನರಹುಲಿ ಮತ್ತು ಕಾಮಾಲೆಗಳ ಚಿಕಿತ್ಸೆಗಾಗಿ ಬೇಯಿಸಿದ ಎಲೆಗಳನ್ನು ಬಳಸುತ್ತಾರೆ.

# ಕಾಮಧೇನು

## ಪ್ರಕೃತಿಯೇ ನಮಗೆ ದಾರಿ ದೀಪ

@ ಕೃಷ್ಣಾಮೃತ

ಗುವಾಹಟಿಯಿಂದ ಈಶಾನ್ಯಕ್ಕೆ ಸುಮಾರು 250 ಕಿಲೋಮೀಟರ್ ದೂರದಲ್ಲಿರುವ ಮಜುಲಿಯು ಭಾರತದ ಅಸ್ಸಾಂನಲ್ಲಿರುವ ಒಂದು ದೊಡ್ಡ ನದಿ ದ್ವೀಪವಾಗಿದ್ದು, ಇದು ದಕ್ಷಿಣ ಮತ್ತು ಪೂರ್ವಕ್ಕೆ ಬ್ರಹ್ಮಪುತ್ರ ನದಿ, ಪಶ್ಚಿಮಕ್ಕೆ ಸುಬನ್ಸಿರಿ ನದಿ ಮತ್ತು ಉತ್ತರಕ್ಕೆ ಖೆರ್ಕುಟಿಯಾ ಕ್ಸುತಿ ಎಂಬ ಬ್ರಹ್ಮಪುತ್ರ ನದಿಯ ಅನಾಬ್ರಂಚ್‌ನಿಂದ ರೂಪುಗೊಂಡಿದೆ. ಈ ದ್ವೀಪದಲ್ಲಿ ಮಿಸಿಂಗ್, ದಿಯೋರಿ ಮತ್ತು ಸೋನೋವಾಲ್ ಕಚ್ರಿ ಬುಡಕಟ್ಟು ಜನಾಂಗದವರು ನೆಲೆಸಿದ್ದಾರೆ. ಇದು ಅಸ್ಸಾಮಿ ನವ- ವೈಷ್ಣವ ಸಂಸ್ಕೃತಿಯ ಕೇಂದ್ರವಾಗಿದೆ. ಇದು 2016ರಲ್ಲಿ ಸರ್ಕಾರಿ ಜಿಲ್ಲೆಯಾದ ದೇಶದ ಮೊದಲ ದ್ವೀಪವಾಗಿದೆ. 2004 ರಿಂದ ಮಜುಲಿ ವಿಶ್ವ ಪರಂಪರೆಯ ತಾಣವಾಗಿ ನಾಮನಿರ್ದೇಶನಕ್ಕಾಗಿ UNESCO ತಾತ್ಕಾಲಿಕ ಪಟ್ಟಿಯಲ್ಲಿದೆ. ಈ ದ್ವೀಪವು ಉದ್ದವಾದ ಮತ್ತು ತೆಳ್ಳಗಿನ ಭೂಮಿಯಾಗಿದ್ದು, ಎರಡು ಸಮಾನಾಂತರ ನದಿಗಳ ನಡುವೆ ಇದೆ, ಉತ್ತರಕ್ಕೆ ಬ್ರಹ್ಮಪುತ್ರ ಮತ್ತು ದಕ್ಷಿಣಕ್ಕೆ ಬುರ್ಹಿಡಿಹಿಂಗ್‌ಗಳು ಲಖು ಎಂಬ ಸ್ಥಳದಲ್ಲಿ ಸೇರುತ್ತಾರೆ. ಮೂಲತಃ ಇದು ರತ್ನಪುರ ಎಂಬ ಹೆಸರನ್ನು ಹೊಂದಿದ್ದು, ಸೂತಿಯ ಸಾಮ್ರಾಜ್ಯದ ರಾಜಧಾನಿಯಾಗಿ ಸೇವೆ ಸಲ್ಲಿಸಿತ್ತು. 17 ನೇ ಶತಮಾನದಲ್ಲಿ ಭಾರಿ ಭೂಕಂಪಗಳ ಸರಣಿಯಾಗಿ ಈ ಪ್ರದೇಶವನ್ನು ಪ್ರದೇಶವನ್ನು ಮರುರೂಪಿಸಿತು. ಈ ಪ್ರವಾಹವು ಬ್ರಹ್ಮಪುತ್ರದ ಮಾರ್ಗವನ್ನು ಬದಲಿಸಲು ಕಾರಣವಾಯಿತು. ಇದರ ಪರಿಣಾಮವಾಗಿ ಮಜುಲಿ ದ್ವೀಪದ ರಚನೆಯಾಗಿದೆ. ಮಜುಲಿಯು 16 ನೇ ಶತಮಾನದಿಂದಲೂ ಅಸ್ಸಾಮಿ ನಾಗರಿಕತೆಯ ಸಾಂಸ್ಕೃತಿಕ ಕೇಂದ್ರವಾಗಿದೆ. ಇದು 16 ನೇ ಶತಮಾನದ ಸಮಾಜ ಸುಧಾರಕ ಶ್ರೀಮಂತ ಶಂಕರದೇವ ಅವರ ಭೇಟಿಯೊಂದಿಗೆ ಸಂಪರ್ಕ ಹೊಂದಿದೆ. ನವ-ವೈಷ್ಣವ ಚಳುವಳಿಯ ಪ್ರವರ್ತಕರಾದ ಶಂಕರದೇವ ಅವರು ವೈಷ್ಣವ ಧರ್ಮವನ್ನು ಬೋಧಿಸಿದರು ಮತ್ತು ದ್ವೀಪದಲ್ಲಿ ಸತ್ರಸ್ ಎಂಬ ಮಠಗಳನ್ನು ಸ್ಥಾಪಿಸಿದರು. ಸತ್ರಗಳ ಸ್ಥಾಪನೆಯೊಂದಿಗೆ ಮಜುಲಿ ವೈಷ್ಣವರ ಪ್ರಮುಖ ಕೇಂದ್ರವಾಯಿತು. ಭಾರತವು 1947ರಲ್ಲಿ ಸ್ವಾತಂತ್ರ್ಯ ಪಡೆಯುವವರೆಗೂ ಇದು ಬ್ರಿಟಿಷ್ ಆಳ್ವಿಕೆಯಲ್ಲಿತ್ತು. ಕಳೆದ 200 ವರ್ಷಗಳಲ್ಲಿ ಮಜುಲಿ ಅದರ ಸುತ್ತಲಿನ ನದಿ ಬೆಳೆದಂತೆ ಗಾತ್ರದಲ್ಲಿ ಕುಗ್ಗಿದೆ.




ಮಜುಲಿಯ ಜನಸಂಖ್ಯೆಯಲ್ಲಿ ಅರುಣಾಚಲ ಪ್ರದೇಶದಿಂದ ಶತಮಾನಗಳ ಹಿಂದೆ ಮಜುಲಿಗೆ ವಲಸೆ ಬಂದ ಮಿಸಿಂಗ್, ದಿಯೊರಿ, ಕೈಬರ್ತಾ ಮತ್ತು ಸೊನೊವಾಲ್ ಕಚಾರಿ ಬುಡಕಟ್ಟು ಜನಾಂಗದವರನ್ನು ಸ್ಥಳೀಯ ಸಮುದಾಯಗಳು ಒಳಗೊಂಡಿವೆ. ಹಿಂದೂ ಅಸ್ಸಾಮಿ ಸಮುದಾಯಗಳಲ್ಲಿ ಕೋಚ್, ಕಲಿತಾ, ಅಹೋಮ್, ಸುತಿಯಾ ಮತ್ತು ಜೋಗಿ ಸೇರಿವೆ. ಇಲ್ಲಿನ ಭಾಷೆ ಅಸ್ಸಾಮಿ ಮತ್ತು ದಿಯೋರಿ. ದ್ವೀಪವು 144 ಹಳ್ಳಿಗಳನ್ನು ಹೊಂದಿದ್ದು, 150,000 ಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿದೆ. ಫೆಬ್ರವರಿ ಮಧ್ಯದಲ್ಲಿ ಐದು ದಿನಗಳ ಕಾಲ ಆಚರಿಸಲಾಗುವ ಅಲಿ ಆಯ್ ಲಿಗಾಂಗ್ ಹಬ್ಬವು ಎರಡನೇ ಬುಧವಾರದಂದು ಆರಂಭಗೊಂಡು ಫಾಲ್ಗುನ್ ತಿಂಗಳ ಮೊದಲ ಬುಧವಾರದಂದು ಕೊನೆಗೊಳ್ಳುವ ಭವ್ಯವಾದ ಕಾರ್ಯಕ್ರಮವಾಗಿದೆ. ಪುರಂಗ್ ಅಪಿನ್ ಅಂದರೆ ಪ್ಯಾಕ್ ಮಾಡಿದ ಬೇಯಿಸಿದ ಅನ್ನ, ಅಪಾಂಗ್ ಅಂದರೆ ಅಕ್ಕಿ ಬಿಯರ್, ಮತ್ತು ವಿವಿಧ ಹಂದಿಮಾಂಸ, ಮೀನು ಮತ್ತು ಕೋಳಿ ಭಕ್ಷ್ಯಗಳಂತಹ ಸ್ಥಳೀಯ ಭಕ್ಷ್ಯಗಳನ್ನು ನೀಡಲಾಗುತ್ತದೆ. ಗುಮ್ರಾಗ್ ಸೋಮನ್ ಎಂಬ ಸಾಂಪ್ರದಾಯಿಕ ಮಿಸಿಂಗ್ ನೃತ್ಯವನ್ನು ಪ್ರತಿ ಹಳ್ಳಿಯಲ್ಲಿ ಉತ್ತಮ ಫಸಲಿಗಾಗಿ ದೋನಿ ಪೊಲೊ ಪೂಜಿಸಲಾಗುತ್ತದೆ. ಕಳೆದ ಅರ್ಧ ಸಹಸ್ರಮಾನದಿಂದ ಮಜುಲಿಯು ಅಸ್ಸಾಮಿ ನಾಗರಿಕತೆಯ ಸಾಂಸ್ಕೃತಿಕ ಕೇಂದ್ರ ಮತ್ತು ತೊಟ್ಟಿಲು. ಆಯುಧಗಳು, ಪಾತ್ರೆಗಳು, ಆಭರಣಗಳು ಮತ್ತು ಸಾಂಸ್ಕೃತಿಕವಾಗಿ ಮಹತ್ವದ ವಸ್ತುಗಳಂತಹ ಪ್ರಾಚೀನ ಕಲಾಕೃತಿಗಳನ್ನು ಸತ್ರಗಳು ರಕ್ಷಿಸುತ್ತವೆ. ಪ್ರಾಚೀನ ಹರಪ್ಪನ್ ನಾಗರಿಕತೆಯ ವಿಧಾನಗಳನ್ನು ಅನುಸರಿಸಿ ಸಾಂಪ್ರದಾಯಿಕ ಕುಂಬಾರಿಕೆಯನ್ನು ಮಾಡಲಾಗುತ್ತದೆ. ಈ ಬುಡಕಟ್ಟು ಜನಾಂಗದವರ ಕೈಮಗ್ಗದ ಕೆಲಸವು ಅಂತರರಾಷ್ಟ್ರೀಯ ಮನ್ನಣೆಯನ್ನು ಪಡೆದಿದೆ. ಕೃಷ್ಣನ ಜೀವನವನ್ನು ಚಿತ್ರಿಸುವ ಮೂರು ದಿನಗಳ ಕಾಲ ನಡೆಯುವ ರಾಸ ಮಹೋತ್ಸವ ಉತ್ಸವವು ದ್ವೀಪದಲ್ಲಿರುವ ಪ್ರತಿಯೊಬ್ಬರನ್ನು ಒಳಗೊಂಡಿರುತ್ತದೆ. ದೂರದ ಜನರು, ಅನಿವಾಸಿಗಳು ಸಹ ಆಚರಿಸಲು ಬರುತ್ತಾರೆ. ಸತ್ರಗಳು ವಿವಿಧ ಕಲೆ ಮತ್ತು ಕರಕುಶಲ ಸಂಪ್ರದಾಯಗಳನ್ನು ಕರಗತ ಮಾಡಿಕೊಂಡಿವೆ. ಮುಜುಲಿಯಲ್ಲಿ ಅಕ್ಕಿ ಮುಖ್ಯ ಬೆಳೆ. ಮಜುಲಿಯು ಶ್ರೀಮಂತ ಮತ್ತು ವೈವಿಧ್ಯಮಯ ಕೃಷಿ ಸಂಪ್ರದಾಯವನ್ನು ಹೊಂದಿದೆ. ಸುಮಾರು 100 ವಿಧದ ಭತ್ತವನ್ನು ಬೆಳೆಯಲಾಗುತ್ತದೆ. ಕೃಷಿಯ ನಂತರ ಮೀನುಗಾರಿಕೆಯೂ ಪ್ರಮುಖ ಉದ್ಯಮವಾಗಿದೆ. ಉತ್ಪಾದಿಸಿದ ಅಕ್ಕಿಯ ಆಕರ್ಷಕ ಶ್ರೇಣಿಗಳಲ್ಲಿ ಕೋಮಲ್ ಸೌಲ್ ಒಂದು ವಿಶಿಷ್ಟ ವಿಧವಾಗಿದ್ದು, ಧಾನ್ಯಗಳನ್ನು 15 ನಿಮಿಷಗಳ ಕಾಲ ಬೆಚ್ಚಗಿನ ನೀರಿನಲ್ಲಿ ಮುಳುಗಿಸಿದ ನಂತರ ತಿನ್ನಬಹುದು ಮತ್ತು ಸಾಮಾನ್ಯವಾಗಿ ಉಪಹಾರ ಧಾನ್ಯವಾಗಿ ತಿನ್ನಬಹುದು. ಬಾವೊಧನ್, ಇದು ನೀರಿನ ಅಡಿಯಲ್ಲಿ ಬೆಳೆಯುತ್ತದೆ ಮತ್ತು ಹತ್ತು ತಿಂಗಳ ನಂತರ ಕೊಯ್ಲು ಮಾಡಲಾಗುತ್ತದೆ. ಮೀನಿನೊಂದಿಗೆ ಸಾಂಪ್ರದಾಯಿಕ ಕೇಕ್ ಮಾಡಲು ಬಳಸುವ ಜಿಗುಟಾದ ಕಂದು ಅಕ್ಕಿಯನ್ನು ಪಿತಾ ಎಂದು ಕರೆಯಲಾಗುತ್ತದೆ. ದ್ವೀಪದ ದಕ್ಷಿಣ ಭಾಗವು ಪಕ್ಷಿ ಪ್ರೇಮಿಗಳ ಸ್ವರ್ಗವಾಗಿದೆ. ಹವಾಮಾನ ಮತ್ತು ವನ್ಯಜೀವಿ ವೀಕ್ಷಣೆಯು ತೃಪ್ತಿಕರವಾಗಿರುವುದರಿಂದ ನವೆಂಬರ್ ಮತ್ತು ಮಾರ್ಚ್ ನಡುವೆ ಭೇಟಿ ಉತ್ತಮ. **ಮುಂದುವರೆಯುವುದು...**

# ಕಲ್ಪವೃಕ್ಷ

@ಪ್ರೀತಂ ರೈ ಇ

## ಲಾನ್ಸ್ ನಾಯಕ್ ಲಖಾ ಸಿಂಗ್

1965 ರ ಇಂಡೋ-ಪಾಕ್ ಯುದ್ಧದ ಸಮಯದಲ್ಲಿ, 68 ಪದಾತಿ ದಳದ ಅಡಿಯಲ್ಲಿ J&K ನ URI ಸೆಕ್ಟರ್‌ನಲ್ಲಿ ಲಾನ್ಸ್ ನಾಯಕ್ ಲಖಾ ಸಿಂಗ್ ಅವರ ಘಟಕವನ್ನು ಕದನ-ವಿರಾಮ ರೇಖೆ ಉದ್ದಕ್ಕೂ ನಿಯೋಜಿಸಲಾಯಿತು. 1965 ರ ಆರಂಭದಿಂದಲೂ ಕದನ ವಿರಾಮ ರೇಖೆಯಲ್ಲಿ ಪಾಕಿಸ್ತಾನಿ ಪಡೆಗಳು ಭಾರತದ ಸರಬರಾಜು ಬೆಂಗಾವಲು ಪಡೆಗಳ ಮೇಲೆ ಗುಂಡು ಹಾರಿಸಲು ಪ್ರಾರಂಭಿಸಿದವು. 1995 ರ ಆಗಸ್ಟ್ 1 ನೇ ವಾರದಲ್ಲಿ ನಿಧಾನವಾಗಿ ಗಡಿಯಾಚೆಯಿಂದ ಒಳನುಸುಳುವಿಕೆ ಹೆಚ್ಚಾಯಿತು, ಅವರ "ಆಪರೇಷನ್ ಜಿಬ್ರಾಲ್ಟರ್"ನ ಭಾಗವಾಗಿ ಪಾಕಿಸ್ತಾನದ ಗೊರಿಲ್ಲಾ ಪಡೆಗಳು ವ್ಯಾಪಕ ಗೊಂದಲಗಳನ್ನು ಸೃಷ್ಟಿಸಲು ಕಾಶ್ಮೀರ ಕಣಿವೆಯನ್ನು ಪ್ರವೇಶಿಸಿದವು. ಪಾಕಿಸ್ತಾನದ ಒಳಗೆ CFL ನಿಂದ 8 ಕಿಮೀ ದೂರದಲ್ಲಿರುವ ಹಾಜಿ-ಪಿರ್ ಪಾಸ್ ಒಳನುಸುಳುವಿಕೆಯ ಪ್ರಮುಖ ಮಾರ್ಗಗಳಲ್ಲಿ ಒಂದಾಗಿದೆ. ಭಾರತೀಯ ಸೇನೆಯು ಒಳನುಸುಳುವಿಕೆ ಮಾರ್ಗವನ್ನು ಪ್ಲಗ್ ಮಾಡಲು ಹಾಜಿ-ಪಿರ್ ಪಾಸ್ ಅನ್ನು ವಶಪಡಿಸಿಕೊಳ್ಳಲು ನಿರ್ಧರಿಸಿತು. ಹಾಜಿ-ಪೀರ್ ಮೇಲೆ ದಾಳಿ ಮಾಡುವ ಮತ್ತು ಆಕ್ರಮಿಸಿಕೊಳ್ಳುವ ಕಾರ್ಯಾಚರಣೆಯನ್ನು "ಆಪ್ ಬಕ್ಷಿ" ಎಂದು ಕರೆಯಲಾಯಿತು, ಇದನ್ನು 69 ಪದಾತಿ ದಳದ ಬ್ರಿಗೇಡ್ ಕಮಾಂಡರ್ ಬ್ರಿಗೇಡಿಯರ್ ಜೋರಾವರ್ ಚಂದ್ ಬಕ್ಷಿ ಅವರ ಹೆಸರನ್ನು ಇಡಲಾಗಿದೆ. ಹಾಜಿ-ಪಿರ್ ಪಾಸ್ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಎರಡು ಸಾಲುಗಳಿಂದ ಸುತ್ತುವರಿದಿದೆ. ಕಾರ್ಯಾಚರಣೆಯ ಯೋಜನೆಯು ಮೊದಲು ಪಾಸ್‌ನ ಭುಜಗಳನ್ನು ಆಕ್ರಮಿಸಿಕೊಳ್ಳುವುದು ಮತ್ತು ನಂತರ ಪಾಸ್ ಅನ್ನು ಜಯಿಸಲು




ಚಲಿಸುವುದು. 19 ಈಸ್ಟರ್ನ್ ರಿಡ್ಜ್ ಅನ್ನು ವಶಪಡಿಸಿಕೊಳ್ಳುವ ಜವಾಬ್ದಾರಿಯನ್ನು ಪಂಜಾಬ್‌ಗೆ ನೀಡಲಾಯಿತು. ಈಸ್ಟರ್ನ್ ರಿಡ್ಜ್‌ಗಾಗಿ ನಡೆದ ಯುದ್ಧದ ಸಮಯದಲ್ಲಿ, 19 ಪಂಜಾಬ್ ಬೆಟಾಲಿಯನ್‌ನ ಚಾರ್ಲಿ ಫ್ಲೈಟ್ ಮೇಜರ್ ಪರ್ಮಿಂದರ್ ಸಿಂಗ್ ನೇತೃತ್ವದಲ್ಲಿ ಪಾಯಿಂಟ್ 877 ಅನ್ನು ವಶಪಡಿಸಿಕೊಳ್ಳಲು ವಹಿಸಲಾಯಿತು. ಲಾನ್ಸ್ ನಾಯಕ್ ಲಖಾ ಸಿಂಗ್ ಅವರು ಈ ಕಾರ್ಯಾಚರಣೆಗೆ ನಿಯೋಜಿಸಲಾದ ಅ Coyನ ಭಾಗವಾಗಿದ್ದರು. ದಾಳಿಯು ಪ್ರಗತಿಯಲ್ಲಿದ್ದಂತೆ, ಲಾನ್ಸ್ ನಾಯಕ್ ಲಖಾ ಸಿಂಗ್ ಮದ್ದುಗುಂಡುಗಳು ಮುಗಿದುವು. ಆದರೆ ದೊಡ್ಡ ಧೈರ್ಯವನ್ನು ಪ್ರದರ್ಶಿಸಿದ ಲಖಾ ಸಿಂಗ್ ಶತ್ರು ಸೈನಿಕರನ್ನು ಕೊಲ್ಲಲು ತನ್ನ ಬಯೋನೆಟ್ ಬಳಸಿ ಮುಂದುವರೆಸಿದರು. ಬಯೋನೆಟ್ ಕೂಡ ಮುರಿದಾಗ, ಲಖಾ ಸಿಂಗ್ ಶೌರ್ಯದ ಅಪರೂಪದ ಪ್ರದರ್ಶನದಲ್ಲಿ ತನ್ನ ಹೆಲ್ಮೆಟ್ ಅನ್ನು ತೆಗೆದು ಶತ್ರು ಸೈನಿಕರನ್ನು ಹೊಡೆದುರುಳಿಸಲು ಪ್ರಾರಂಭಿಸಿದರು. ಆದಾಗ್ಯೂ, ಅವರು ಶತ್ರುಗಳ ಫಿರಂಗಿಯ ಸ್ಫೋಟವನ್ನು ಪಡೆದರು ಮತ್ತು ಹುತಾತ್ಮರಾದರು. ಲಖಾ ಸಿಂಗ್ ಅವರು ದೇಶ ಸೇವೆಯಲ್ಲಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದ ವೀರ ಸೈನಿಕ. ಅವರ ಅತ್ಯುತ್ತಮ ಧೈರ್ಯ, ಹೋರಾಟದ ಮನೋಭಾವ ಮತ್ತು ಅತ್ಯುನ್ನತ ತ್ಯಾಗಕ್ಕಾಗಿ ಅವರಿಗೆ "ವೀರ ಚಕ್ರ" ಶೌರ್ಯ ಪ್ರಶಸ್ತಿಯನ್ನು ನೀಡಲಾಯಿತು. ಅವರು ಪತ್ನಿ ಶ್ರೀಮತಿ ಸೀತಾನ್ ದೇವಿ ಅವರನ್ನು ಅಗಲಿದ್ದಾರೆ. ಲ್ಯಾನ್ಸ್ ನಾಯಕ್ ಲಖಾ ಸಿಂಗ್ ಅವರು 2 ನೇ ಫೆಬ್ರವರಿ 1933 ರಂದು ಹಿಮಾಚಲ ಪ್ರದೇಶದ ಕಂಗ್ರಾ ಜಿಲ್ಲೆಯ ಬಲಹ್ರಾ ಮರಿಯಾ ಗ್ರಾಮದಲ್ಲಿ ಶ್ರೀ ಫನಾ ರಾಮ್ ಅವರ ಪುತ್ರನಾಗಿ ಜನಿಸಿದರು. ಲಖಾ ಸಿಂಗ್ ಅವರು 22 ನೇ ವಯಸ್ಸಿನಲ್ಲಿ 22 ನೇ ವಯಸ್ಸಿನಲ್ಲಿ 1956 ರ ಜನವರಿ 9 ರಂದು ಸೈನ್ಯಕ್ಕೆ ಸೇರಿದರು. ಅವರು ಪಂಜಾಬ್ ರೆಜಿಮೆಂಟ್‌ನ 19 ಪಂಜಾಬ್ ಬಿಎನ್‌ಗೆ ನೇಮಕಗೊಂಡರು. ಇವರನ್ನು ಕರಾವಳಿ ತರಂಗಿಣಿ ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತಿದೆ.

# ಪಾರಿಜಾತ

ಕರಾವಳಿ ತರಂಗಿಣಿ

ಒಂದು ಮನೆಯಲ್ಲಿ ಹುಟ್ಟಿ ಇನ್ನೊಂದು ಮನೆ ಬೆಳಗುವ ಹೆಣ್ಣು ಸಾದನೆಯ ಮೆಟ್ಟಿಲನ್ನು ಮೆಟ್ಟುವುದು ಅಷ್ಟು ಸುಲಭದ ಕೆಲಸವಲ್ಲ. ಆದರೂ ಎಷ್ಟೇ ಕಷ್ಟ ಬಂದರೂ ತನ್ನ ಸಾಧನೆಯ ಗುರಿಯನ್ನು ತಲುಪಿ ಉಳಿದ ಹೆಣ್ಣು ಮಕ್ಕಳಿಗೆ ಮಾದರಿಯಾಗಿದ್ದಾರೆ. ಅಂತಹ ಹೆಣ್ಣು ಮಕ್ಕಳಲ್ಲಿ ಕರಾವಳಿ ತರಂಗಿಣಿಯ ಇಂದಿನ ಅತಿಥಿ ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಮೊದಲ ಭಾರತೀಯ ಮಹಿಳೆ ಕರ್ಣಂ ಮಲ್ಲೇಶ್ವರಿ. ಇವರು 1 ಜೂನ್ 1975ರಲ್ಲಿ ಆಂಧ್ರಪ್ರದೇಶದ ಕುಗ್ರಾಮವಾದ ಅಮದಾಲವಲಸ ಬಳಿಯ ವೂಸವಾನಿಪೇಟಾದಲ್ಲಿ ಕರ್ಣಂ ಕುಟುಂಬದಲ್ಲಿ ಜನಿಸಿದರು. ಇವರಿಗೆ ನಾಲ್ಕು ಸಹೋದರಿಯರಿದ್ದಾರೆ. ಮಲ್ಲೇಶ್ವರಿ ಅವರು 12ನೇ ವಯಸ್ಸಿನಲ್ಲಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ತರಬೇತುದಾರ ನೀಲಂಶೆಟ್ಟಿ ಅಪ್ಪಣ್ಣ ಅವರಲ್ಲಿ ತರಬೇತಿ ಪಡೆದರು. ಸಹೋದರಿ ಮದುವೆಯಾಗಿ ದೆಹಲಿಯಲ್ಲಿ ವಾಸಿಸುತ್ತಿದ್ದರಿಂದ ಮಲ್ಲೇಶ್ವರಿ ಅವರು ಉತ್ತಮ ತರಬೇತಿಗಾಗಿ ದೆಹಲಿ ನಗರಕ್ಕೆ ತೆರಳಿದರು. ಅಲ್ಲಿ ಇವರಿಗೆ ಉತ್ತಮ ಕ್ರೀಡಾಪಟುವಾಗಲು ಸಾಮರ್ಥ್ಯವಿದೆ ಎಂದು ಸ್ಪಷ್ಟವಾಯಿತು. ಆಕೆಯ ಪ್ರತಿಭೆಯನ್ನು ಶೀಘ್ರದಲ್ಲೇ ಭಾರತೀಯ ಕ್ರೀಡಾ ಪ್ರಾಧಿಕಾರ ಗುರುತಿಸಿತು. 1990 ರಲ್ಲಿ ಮಲ್ಲೇಶ್ವರಿಯವರನ್ನು ರಾಷ್ಟ್ರೀಯ ಶಿಬಿರಕ್ಕೆ ಸೇರಿಕೊಂಡರು. ನಾಲ್ಕು ವರ್ಷಗಳ ನಂತರ, ಅವರು 54-ಕೆಜಿ ವೇಟ್-ಲಿಫ್ಟಿಂಗ್ ವಿಶ್ವ ಚಾಂಪಿಯನ್‌ಶಿಪ್ ವಿಜೇತರಾದರು. ಮಲ್ಲೇಶ್ವರಿ 1994 ಮತ್ತು 1995 ರಲ್ಲಿ 54 ಕೆಜಿ ವಿಭಾಗದಲ್ಲಿ ವಿಶ್ವ ಪ್ರಶಸ್ತಿಯನ್ನು ಗೆದ್ದರು. 1993 ಮತ್ತು 1996 ರಲ್ಲಿ ಮೂರನೇ ಸ್ಥಾನ ಪಡೆದರು. 1994 ರಲ್ಲಿ, ಅವರು ಇಸ್ತಾನ್‌ಬುಲ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ ಗೆದ್ದರು ಮತ್ತು 1995 ರಲ್ಲಿ ಅವರು 54 ಕೆಜಿ ವಿಭಾಗದಲ್ಲಿ ಕೊರಿಯಾದಲ್ಲಿ ನಡೆದ ಏಷ್ಯನ್ ವೇಟ್‌ಲಿಫ್ಟಿಂಗ್ ಚಾಂ




ಪಿಯನ್ ಶಿಪ್‌ಗಳನ್ನು ಗೆದ್ದರು. ಆ ವರ್ಷ, ಅವರು ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ದಾಖಲೆಯ 113 ಕೆಜಿ ಎತ್ತುವ ಮೂಲಕ ಚೀನಾದಲ್ಲಿ ಪ್ರಶಸ್ತಿಯನ್ನು ಗೆದ್ದರು. ತನ್ನ ಒಲಂಪಿಕ್ ಗೆಲುವಿಗೆ ಮುಂಚೆಯೇ, ಮಲ್ಲೇಶ್ವರಿ 11 ಚಿನ್ನದ ಪದಕಗಳನ್ನು ಒಳಗೊಂಡಂತೆ 29 ಅಂತರಾಷ್ಟ್ರೀಯ ಪದಕಗಳೊಂದಿಗೆ ಎರಡು ಬಾರಿ ವೇಟ್ ಲಿಫ್ಟಿಂಗ್ ವಿಶ್ವ ಚಾಂಪಿಯನ್ ಆಗಿದ್ದರು. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪದಕಗಳ ಜೊತೆಗೆ, ಮಲ್ಲೇಶ್ವರಿಗೆ 1994 ರಲ್ಲಿ ಅರ್ಜುನ ಪ್ರಶಸ್ತಿ , 1999 ರಲ್ಲಿ ರಾಜೀವ್ ಗಾಂಧಿ ಖೇಲ್ ರತ್ನ, ಮತ್ತು 1999ರಲ್ಲಿ ಪದ್ಮಶ್ರೀ ಪ್ರಶಸ್ತಿ ಪಡೆದರು. 2000 ರ ಸಿಡ್ನಿ ಒಲಿಂಪಿಕ್ಸ್‌ನಲ್ಲಿ ಮಲ್ಲೇಶ್ವರಿ "ಸ್ನ್ಯಾಚ್"ನಲ್ಲಿ 110 ಕೆಜಿ ಮತ್ತು "ಕ್ಲೀನ್ ಮತ್ತು ಜರ್ಕ್" ವಿಭಾಗದಲ್ಲಿ 130 ಕೆಜಿ ಒಟ್ಟು 240 ಕೆಜಿ ಎತ್ತಿ, ಒಲಿಂಪಿಕ್ ಪದಕ ಗೆದ್ದ ಮೊದಲ ಭಾರತೀಯ ಮಹಿಳೆಯಾಗಿದ್ದಾರೆ. 1997 ರಲ್ಲಿ, ಮಲ್ಲೇಶ್ವರಿಯವರು ತನ್ನ ಸಹ ವೇಟ್ ಲಿಫ್ಟರ್ ರಾಜೇಶ್ ತ್ಯಾಗಿ ಅವರನ್ನು ವಿವಾಹವಾದರು. 2001 ರಲ್ಲಿ, ತನ್ನ ಕ್ರೀಡೆಯಲ್ಲಿ ಒಲಿಂಪಿಕ್ ಕಂಚಿನ ಪದಕವನ್ನು ಗೆದ್ದ ಒಂದು ವರ್ಷದ ನಂತರ ಅವರಿಗೆ ಗಂಡು ಮಗುವಾಯಿತು. ಅವರು 2002 ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಸ್ಪರ್ಧೆಗಳಿಗೆ ಮರಳಲು ಯೋಜಿಸಿದ್ದರು. ಆದರೆ ಅವರ ತಂದೆಯ ಮರಣದ ಕಾರಣದಿಂದ ಹಿಂದೆ ಸರಿದರು. 2004ರ ಒಲಿಂಪಿಕ್ಸ್‌ನಲ್ಲಿ ಗುರಿ ಮುಟ್ಟಲು ವಿಫಲವಾದ ನಂತರ ಅವರು ನಿವೃತ್ತರಾದರು. ಕರ್ಣಂ ಮಲ್ಲೇಶ್ವರಿ ಮತ್ತು ತ್ಯಾಗಿ ಪ್ರಸ್ತುತ ಹರಿಯಾಣದ ಯಮುನಾ ನಗರದಲ್ಲಿ ತಮ್ಮ ಮಗ ಮತ್ತು ಅತ್ತೆಯೊಂದಿಗೆ ವಾಸಿಸುತ್ತಿದ್ದು, ಅವರು ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದಲ್ಲಿ ಮುಖ್ಯ ಜನರಲ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಾರೆ. ಇವರಿಗೆ ಕರಾವಳಿ ತರಂಗಿಣಿ ಶುಭ ಹಾರೈಸುತ್ತಿದೆ.

# ಸುದ್ದಿ ತುಣುಕು

LKG, UKGಗೆ ದಾಖಲಾತಿಗೆ ಶೀಘ್ರ ಕಾಯ್ದೆ ತರಲಾಗುವುದು ಎಂದು ಸಚಿವ ಮಧು ಬಂಗಾರಪ್ಪ ಅವರು ತಿಳಿಸಿದ್ದಾರೆ.

ಮುಡಾ ಪ್ರಕರಣ ಬಿ ರಿಪೋರ್ಟ್ ಅಂಗೀಕಾರ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ, ಪತ್ನಿ ಪಾರ್ವತಿ ಮತ್ತಿತರರಿಗೆ ಹೈಕೋರ್ಟ್ ತುರ್ತು ನೋಟಿಸ್ ಜಾರಿ

ಶಾಸಕರ ಕುಟುಂಬಕ್ಕೆ ಐಪಿಎಲ್ ಟಿಕೆಟ್ ನೀಡುವ ಕುರಿತು ವಿಧಾನಸಭೆಯಲ್ಲಿ ಚರ್ಚೆಯಾಯಿತು. ಈ ಕುರಿತು ಕ್ರಮ ವಹಿಸುವುದಾಗಿ ಡಿಸಿಎಂ ಡಿಕೆಶಿ ಭರವಸೆ ನೀಡಿದರು.

ಹೈದರಾಬಾದ್‌ನಲ್ಲಿ ಉಗ್ರರೊಂದಿಗೆ ನಂಟು ಹೊಂದಿರುವ ಆರೋಪಿಗಳನ್ನು ನ್ಯಾಯಾಲಯ ಹೆಚ್ಚಿನ ವಿಚಾರಣೆಗೆ ಪೊಲೀಸರ ವಶಕ್ಕೆ ನೀಡಿದೆ.

ಜನರಿಗೆ ವಂಚಿಸಿದ ಆರೋಪದ ಮೇಲೆ ವೈದ್ಯರೊಬ್ಬನ ವಿರುದ್ಧ ದಾಖಲಾದ ಕ್ರಿಮಿನಲ್ ಪ್ರಕರಣ ರದ್ದು ಮಾಡಲು ಹೈಕೋರ್ಟ್ ನಿರಾಕರಿಸಿದೆ.

ಗುಂಡ್ಲುಪೇಟೆ ತಾಲೂಕಿನ ರೈತರೊಬ್ಬರ ಜಮೀನಿನಲ್ಲಿ ತಾಯಿ ಹುಲಿಯೊಂದು ಮರಿಯೊಟ್ಟಿಗೆ ಕಾಣಿಸಿಕೊಂಡಿದೆ.

ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತದಲ್ಲಿ ಮೃತಪಟ್ಟ ಅಭಿಮಾನಿಗಳ ಸ್ಮರಣಾರ್ಥ ಸ್ಮಾರಕ ಅನಾವರಣ ಮಾಡಲಾಯಿತು.

ರಾಜ್ಯದಲ್ಲಿ ನೋಂದಣಿಯಾಗುವ ವಾಹನ ಹಾಗೂ ಸ್ಲೀಪರ್ ಕೋಚ್ ಬಸ್‌ಗಳಿಗೆ ಪ್ರತಿ ಆಸನಗಳಿಗಿರುವ ತೆರಿಗೆಯನ್ನು ಗಣನೀಯ ಪ್ರಮಾಣದಲ್ಲಿ ಇಳಿಸಲಾಗಿದೆ.

ಆಧ್ಯಾತ್ಮಿಕ ಮುಖಂಡ ಶ್ರೀ ಶ್ರೀ ರವಿಶಂಕರ್ ಗುರೂಜಿ ವಿರುದ್ಧ ಕೇಳಿಬಂದಿದ್ದ ಭೂ ಒತ್ತುವರಿ ಆರೋಪ ಪ್ರಕರಣವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಮದ್ಯ ಸೇವನೆ ಬಳಿಕ ಬಾಲಕ ಆತ್ಮಹತ್ಯೆ ಮಾಡಿಕೊಂಡ ಪ್ರಕರಣದಲ್ಲಿ ಮದ್ಯ ಸರಬರಾಜು ಮಾಡಿದ ಕಂಪನಿ ವಿರುದ್ಧ ಕ್ರಿಮಿನಲ್ ಪ್ರಕರಣ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

ವಿಧಾನಸೌಧದ ಮುಂಭಾಗದಲ್ಲಿ ನಡೆದ ಶಾಸಕರ ಫೋಟೋ ಶೂಟ್ ಇದೀಗ ನಾನಾ ರಾಜಕೀಯ ಚರ್ಚೆಗಳನ್ನು ಹುಟ್ಟುಹಾಕಿದೆ.

ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಇವಿಎಂ ಬದಲು ಬ್ಯಾಲೆಟ್ ಪೇಪರ್ ತರುವ ತಿದ್ದುಪಡಿ ಮಸೂದೆಗೆ ಮೇಲ್ಮನೆಯಲ್ಲಿ ಅಂಗೀಕಾರ

ದಾವಣಗೆರೆ ದಕ್ಷಿಣ ಕ್ಷೇತ್ರದ ಬೈ ಎಲೆಕ್ಷನ್ ಕಣಕ್ಕೆ ಎಸ್‌ಡಿಪಿಐ ಇಳಿದಿದ್ದು, ಅಪ್ಸರ್ ಕೊಡ್ಲಿಪೇಟೆ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ.

ತಳ್ಳಪಾಕ ಅಣ್ಣಾಮಾಚಾರ್ಯರ 111 ಅಡಿ ಎತ್ತರದ ಪಂಚಲೋಹ ಪ್ರತಿಮೆಯನ್ನು ಅಮೆರಿಕದಲ್ಲಿ ಸ್ಥಾಪಿಸಲು ರಚನೆ ಮಾಡಲಾಗುತ್ತಿದೆ ಎಂದು ವರದಿಯಾಗಿದೆ.

ಫ್ರಾನ್ಸ್ ಜಿ7 ಶೃಂಗಸಭೆಯಲ್ಲಿ ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಕುರಿತು ಚರ್ಚೆ ನಡೆಯಲಿದೆ.

ಸ್ನೇಹಿತ ದೇಶಗಳಿಗೆ ಹಾರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸಿದ್ದೇವೆ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ತಿಳಿಸಿದ್ದಾರೆ.

ಸೋನಿಯಾ ಗಾಂಧಿ ಅವರ ಎದೆಯಲ್ಲಿ ಬಿಗಿತ ಮತ್ತು ಉಸಿರಾಟದ ತೊಂದರೆ ಕಾಣಿಸಿಕೊಂಡಿತ್ತು. ಹೀಗಾಗಿ, ಅವರನ್ನು ವೈದ್ಯರು ನಿಗಾದಲ್ಲಿಟ್ಟು ಚಿಕಿತ್ಸೆ ನೀಡುತ್ತಿದ್ದಾರೆ.

ಇರಾನ್, ಇಸ್ರೇಲ್ ಮತ್ತು ಅಮೆರಿಕ ಮಧ್ಯದ ಯುದ್ಧ ಜಾಗತಿಕವಾಗಿ ತೀವ್ರ ಪರಿಣಾಮ ಬೀರಿದೆ. ಇದು ಅಮೆರಿಕದ ಆರ್ಥಿಕತೆಗೂ ಭಾರೀ ಹೊಡೆತ ಕೊಟ್ಟಿದೆ.

ಪದ್ಮಶ್ರೀ ವಿಜೇತ ಚೈತ್ರಂ ಪವಾರ್ ನೇತೃತ್ವದಲ್ಲಿ ಮಹಾರಾಷ್ಟ್ರದ ಮೂರು ಗ್ರಾಮಗಳು ಇಂಧನ ಸಂರಕ್ಷಿಸುವ ಸರ್ವಾನುಮತದ ನಿರ್ಣಯ ಅಂಗೀಕರಿಸಿವೆ.

ಮೇಲ್ಮನೆ ಸದಸ್ಯರಿಗೆ ಶಾಸಕರ ನಿಧಿಯಿಂದ ಅನುದಾನ ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದ್ದಾರೆ.

# ರವೆ ಲಡ್ಡು



**ಬೇಕಾಗುವ ಪದಾರ್ಥಗಳು :**
ಬಾಂಬೆ ರವೆ-250ಗ್ರಾಂ ಸಕ್ಕರೆ-250 ಗ್ರಾಂ, ತುಪ್ಪ-ದ್ರಾಕ್ಷಿ, ಗೋಡಂಬಿ ಹುರಿಯಲು ಬೇಕಾಗುವಷ್ಟು, ಕೊಬ್ಬರಿ ತುರಿ-50ಗ್ರಾಂ, ಒಣದ್ರಾಕ್ಷಿ-10, ಗೋಡಂಬಿ-10 ಕಾಯಿಸಿದ ಹಾಲು-1 ಲೋಟ

**ಮಾಡುವ ವಿಧಾನ :** ಮೊದಲು ರವೆಯನ್ನು ಬೆರಳಿನಲ್ಲಿ ಮುಟ್ಟಿದರೆ ಸುಡುವಷ್ಟು ಹದಕ್ಕೆ ಹುರಿದುಕೊಳ್ಳಬೇಕು. ನಂತರ ಒಣದ್ರಾಕ್ಷಿ , ಗೋಡಂಬಿ ಮತ್ತು ಏಲಕ್ಕಿಯನ್ನು ತುಪ್ಪದಲ್ಲಿ ಹದವಾಗಿ ಹುರಿದುಕೊಂಡು. ಸಕ್ಕರೆಯನ್ನು ಒಂದೆಳೆ ಪಾಕ ಮಾಡಿಕೊಳ್ಳಬೇಕು, ಪಾಕಕ್ಕೆ ತುರಿದ ಕೊಬ್ಬರಿ, ದ್ರಾಕ್ಷಿ, ಗೋಡಂಬಿ ಜೊತೆಗೆ ಮೊದಲೇ ಹುರಿದುಕೊಂಡಿರುವ ರವೆಯಲ್ಲಿ ಚೆನ್ನಾಗಿ ಬೆರಸಿ, ನಂತರ ಉಂಡೆ ಕಟ್ಟಲು ಬೇಕಾದ ಹದಕ್ಕೆ ಕಾಯಿಸಿದ ಹಾಲನ್ನು ಸ್ವಲ್ಪ, ಸ್ವಲ್ಪವಾಗಿ ಹಾಕಿಕೊಂಡು ಉಂಡೆಯನ್ನು ಕಟ್ಟಿ ಮತ್ತೊಂದು ಪಾತ್ರೆಯಲ್ಲಿ ಹಾಕಬೇಕು. ಈಗ ರವೆ ಲಡ್ಡು ಸವಿಯಲು ಸಿದ್ಧ.

# ಯುರೋಪಿಯನ್ ಒಕ್ಕೂಟದ ವಲಸೆ ನೀತಿ




ಬ್ರಸೆಲ್ಸ್: ಯುರೋಪಿಯನ್ ಒಕ್ಕೂಟ (EU) ತನ್ನ ವಲಸೆ ನೀತಿಯನ್ನು ಹೆಚ್ಚು ಕಠಿಣಗೊಳಿಸುವ ಮೂಲಕ ಐತಿಹಾಸಿಕ ಬದಲಾವಣೆಗೆ ಮುನ್ನುಡಿ ಬರೆದಿದೆ. ಅಕ್ರಮ ವಲಸೆಯನ್ನು ತಡೆಗಟ್ಟುವ ಉದ್ದೇಶದಿಂದ ಜಾರಿಗೆ ತರಲಾದ ಈ ಹೊಸ ನಿಯಮಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರೀ ಚರ್ಚೆ ಮತ್ತು ಪರ-ವಿರೋಧದ ಅಭಿಪ್ರಾಯಗಳಿಗೆ ಕಾರಣವಾಗಿವೆ. ಈ ಹೊಸ ನೀತಿಯ ಅಡಿಯಲ್ಲಿ ವಲಸೆಗಾರರ ಪರೀಕ್ಷಾ ಪ್ರಕ್ರಿಯೆಯನ್ನು ಹೆಚ್ಚು ಬಿಗಿಗೊಳಿಸಲಾಗಿದೆ.

# ಹೆಚ್ಚುವರಿಯಾಗಿ 4,500 ಅಮೆರಿಕನ್ ಸೈನಿಕರ



ನ್ಯೂಯಾರ್ಕ್ : ಹಾರ್ಮುಜ್ ಜಲಸಂಧಿಯಲ್ಲಿ ಉಂಟಾಗಿರುವ ಬಿಕ್ಕಟ್ಟು ಮತ್ತು ಇರಾನ್ ನೀಡಿದ್ದ ಗಡುವು ಮುಗಿಯಲು ಕೆಲವೇ ಗಂಟೆಗಳು ಬಾಕಿ ಇರುವ ಬೆನ್ನಲ್ಲೇ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪಶ್ಚಿಮ ಏಷ್ಯಾಗೆ ಹೆಚ್ಚುವರಿಯಾಗಿ 4,500 ಅಮೆರಿಕನ್ ಸೈನಿಕರನ್ನು ರವಾನಿಸಲು ಆದೇಶಿಸಿದ್ದಾರೆ. ಜಾಗತಿಕ ತೈಲ ಪೂರೈಕೆಯ ನಾಳದಂತಿರುವ ಹಾರ್ಮುಜ್ ಜಲಸಂಧಿಯನ್ನು ಇರಾನ್ ಮುಚ್ಚದಂತೆ ತಡೆಯಲು ಈ ಸೈನಿಕರನ್ನು ನಿಯೋಜಿಸಲಾಗುತ್ತಿದೆ.

# ಡಿಸ್ಟಿಲೇಷನ್ ಘಟಕಗಳು ಈಗ ಯುದ್ಧದ ನೇರ ಗುರಿ!



ರಿಯಾದ್ : ಜಗತ್ತು ಇಂದು ಪಶ್ಚಿಮ ಏಷ್ಯಾದ ಸಂಘರ್ಷವನ್ನು ಕೇವಲ ತೈಲ ಬೆಲೆ ಏರಿಕೆಯ ದೃಷ್ಟಿಯಿಂದ ನೋಡುತ್ತಿದೆ. ಆದರೆ, ತೆರೆಮರೆಯಲ್ಲಿ ಇಡೀ ಗಲ್ಫ್ ರಾಷ್ಟ್ರಗಳ ಜೀವನಾಡಿಯನ್ನೇ ಕತ್ತರಿಸುವಂತಹ ಭೀಕರ ಸಂಚಲನವೊಂದು ಶುರುವಾಗಿದೆ. ಅದು ತೈಲದ ಬಿಕ್ಕಟ್ಟಲ್ಲ, ಬದಲಾಗಿ ನೀರಿನ ಬಿಕ್ಕಟ್ಟು. ಇರಾನ್ ಮತ್ತು ಅಮೆರಿಕ ನಡುವಿನ ಹೆಚ್ಚುತ್ತಿರುವ ಉದ್ವಿಗ್ನತೆಯ ನಡುವೆ, ಗಲ್ಫ್ ರಾಷ್ಟ್ರಗಳ ಕುಡಿಯುವ ನೀರಿನ ಮುಖ್ಯ ಆಧಾರವಾಗಿರುವ ಲವಣಮುಕ್ತಗೊಳಿಸುವ ಘಟಕಗಳು ಈಗ ಯುದ್ಧದ ನೇರ ಗುರಿಯಾಗಿವೆ.

# ಇರಾನ್ ಜೊತೆ ನಿಂತ ಕಾಶ್ಮೀರಿಗಳು!



ನವದೆಹಲಿ : ಸೌದಿ ಆದಿಯಾಗಿ ಅನೇಕ ಇಸ್ಲಾಮಿಕ್ ಯುದ್ಧಗ್ರಸ್ತ ಇರಾನ್ ನೆರವಿಗೆ ಧಾವಿಸದೇ ಅಂತರ ಕಾಯ್ದುಕೊಂಡಿದ್ದರೂ ಭಾರತ ಸರ್ಕಾರವೇ ತಟಸ್ಥ ನಿಲುವು ಹೊಂದಿದ್ದರೂ ಸಹ ಕಾಶ್ಮೀರಿಗಳು ಇರಾನ್ ನೆರವಿಗೆ ಧಾವಿಸುತ್ತಿದ್ದಾರೆ. ತಮ್ಮ ಸ್ವಂತ ಚಿನ್ನಾಭರಣಗಳನ್ನು ನೀಡುವ ಮೂಲಕ ಕಾಶ್ಮೀರಿಗಳು ಇರಾನ್ ಜೊತೆ ನಿಂತಿದ್ದಾರೆ. ಈ ನೆರವಿನ ಬಗ್ಗೆ ಇರಾನ್ ಪ್ರತಿಕ್ರಿಯೆ ನೀಡಿದ್ದು, ಭಾರತದಲ್ಲಿರುವ ಇರಾನ್ ರಾಯಭಾರ ಕಚೇರಿ ಎಕ್ಸ್‌ನಲ್ಲಿ ಥ್ಯಾಂಕ್ಯೂ ಇಂಡಿಯಾ (ಧನ್ಯವಾದಗಳು ಭಾರತ) ಎಂದು ಬರೆದಿದೆ.

# ಇರಾನ್ ಯುದ್ಧ : ಕಂಗಾಲಾದ ಪಾಕಿಸ್ತಾನ




ಇಸ್ಲಾಮಾಬಾದ್ : ಇರಾನ್ ಯುದ್ಧದಲ್ಲಿ ಕಂಗಾಲಾದ ಪಾಕಿಸ್ತಾನ, ಪೆಟ್ರೋಲ್ ಬೆಲೆ ಶೇಕಡಾ 200ರಷ್ಟು ಹೆಚ್ಚಳ, ಭಾರತದಲ್ಲಿ 2 ರೂಪಾಯಿ ಏರಿಕೆ ಮಾಡಲಾಗಿದೆ. ಆದರೆ ಪಾಕಿಸ್ತಾನದಲ್ಲಿ ಬರೋಬ್ಬರಿ 200 ಪರ್ಸೆಂಟ್ ಏರಿಕೆಯಾಗಿದೆ. ಪಾಕಿಸ್ತಾನದಲ್ಲಿ ಒಂದು ಲೀಟರ್ ಪ್ರೀಮಿಯಂ ಪೆಟ್ರೋಲ್ ಬೆಲೆ ಕಪಿಖ 266.17 ರೂಪಾಯಿಂದ ಇದೀಗ PKR 321.17 ರೂಪಾಯಿಗೆ ಏರಿಕೆಯಾಗಿದೆ. ಬೆಲೆ ಏರಿಕೆಯಿಂದ ಪ್ರೀಮಿಯಂ ಡೀಸೆಲ್ ಬೆಲೆ ಪಾಕಿಸ್ತಾನದಲ್ಲಿ ಒಂದು ಲೀಟರ್‌ಗೆ ಕಪಿಖ 335.86 ರೂಪಾಯಿ ಆಗಿದೆ.

# ಭಯೋತ್ಪಾದಕ ಬಿಲಾಲ್ ಆರಿಫ್ ಸಲಾಫಿ ಕೊಲೆ



ಪಾಕಿಸ್ತಾನ : ಪಾಕಿಸ್ತಾನದ ಲಾಹೋರ್‌ನಲ್ಲಿ ಈದ್ ಪ್ರಯುಕ್ತ ಪ್ರಾರ್ಥನೆಗೆ ತೆರಳಿದ್ದ, ಭಯೋತ್ಪಾದಕ ಸಂಘಟನೆ ಲಷ್ಕರ್-ಎ-ತೈಬಾ ಕಮಾಂಡರ್ ಬಿಲಾಲ್ ಆರಿಫ್ ಸಲಾಫಿಯನ್ನು ಗುಂಡಿಕ್ಕಿ ಹಾಗೂ ಮಾರಕಾಸ್ತ್ರದಿಂದ ಚುಚ್ಚಿ ಕೊಲ್ಲಲಾಗಿದೆ ಎಂದು ವರದಿಯಾಗಿದೆ. ಈ ಸಭೆಯಲ್ಲಿ ಮೌಲಾನಾ ಅಬು ಜರ್ ಮತ್ತು ಮೌಲಾನಾ ಅಬ್ದುಲ್ ರೆಹಮಾನ್ ಅಬಿದ್ ಸೇರಿದಂತೆ ಹಲವಾರು ಜನ ಭಾಗವಹಿಸಿದ್ದರು. ಪ್ರಾರ್ಥನೆ ಮುಗಿಸಿ ಬಿಲಾಲ್ ಆರಿಫ್ ಸಲಾಫಿ ಹೊರಬರುತ್ತಿದ್ದಂತೆ ಇಬ್ಬರು ವ್ಯಕ್ತಿಗಳು ಬಿಲಾಲ್ ಮೇಲೆ ದಾಳಿ ಮಾಡಿದ್ದಾರೆ.

# 'ಸದ್ದಾಂ ಹುಸೇನ್‌ಗೆ ಗತಿಯೇ ಆಗಲಿದೆ' : ಇರಾನ್



ಟೆಹ್ರಾನ್ : ಸರ್ವೋಚ್ಚ ನಾಯಕ ಅಲಿ ಖಮೇನಿ ಸೇರಿದಂತೆ ತನ್ನ ಉನ್ನತ ನಾಯಕರ ಸಾವಿನಿಂದ ಕುದಿಯುತ್ತಿರುವ ಇರಾನ್, ಶತ್ರುಗಳಾದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಹತ್ಯೆಯ ಬೆದರಿಕೆಯೊಡ್ಡಿದ್ದು, 'ಸದ್ದಾಂ ಹುಸೇನ್‌ಗೆ ಆದ ಗತಿಯೇ ನಿಮಗೂ ಆಗಲಿದೆ' ಎಂದು ಗುಡುಗಿದೆ. ಇದೇ ವೇಳೆ, ಯಾವುದೇ ಕಾರಣಕ್ಕೂ ಕದನ ವಿರಾಮಕ್ಕೆ ಒಪ್ಪುವುದಿಲ್ಲ, ಇರಾಕ್ ಮಾಜಿ ಅಧ್ಯಕ್ಷ ಸದ್ದಾಂ ಹುಸೇನ್‌ಗಾದ ಗತಿಯೇ ಟ್ರಂಪ್ ಮತ್ತು ನೆತನ್ಯಾಹುಗೂ ಆಗಲಿದೆ ಎಂದು ಪುನರುಚ್ಚರಿಸಿದೆ.

# ಟಿ20ಲೀಗ್ ಪ್ರಾರಂಭಿಸಲು ನಿರ್ಧರಿಸಿದ ನ್ಯೂಜಿಲೆಂಡ್




ಹೈದರಬಾದ್ : ವಿಶ್ವದಾದ್ಯಂತ ಟಿ20 ಲೀಗ್‌ನ ಜನಪ್ರಿಯತೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವುದನ್ನು ಗಮನಿಸಿರುವ ನಾನಾ ದೇಶಗಳು ತಮ್ಮ ದೇಶದಲ್ಲೂ ಟಿ20 ಲೀಗ್‌ಗಳನ್ನು ಆರಂಭಿಸಿವೆ. ಅಂತಹ ದೇಶಗಳ ಸಾಲಿಗೆ ಇದೀಗ ನ್ಯೂಜಿಲೆಂಡ್ ದೇಶವೂ ಸೇರ್ಪಡೆಯಾಗುತ್ತಿದೆ. ಭಾರತ, ಆಸ್ಟ್ರೇಲಿಯಾ, ಇಂಗ್ಲೆಂಡ್, ವೆಸ್ಟ್ ಇಂಡೀಸ್, ಯುನೈಟೆಡ್ ಸ್ಟೇಟ್ಸ್ ಮತ್ತು ದುಬೈ ಈಗಾಗಲೇ ಟಿ20 ಲೀಗ್‌ಗಳನ್ನು ಪ್ರಾರಂಭಿಸಿ ಸಾಕಷ್ಟು ಯಶಸ್ಸು ಗಳಿಸಿವೆ.

# ಪಿ.ಎಸ್.ಎಲ್‌ನಲ್ಲಿ ಪಾಲ್ಗೊಳ್ಳದಂತೆ ಬೆದರಿಕೆ!



ಹೈದರಬಾದ್ : ಮುಂಬರುವ ಪಾಕಿಸ್ತಾನ ಪ್ರೀಮಿಯರ್ ಲೀಗ್ ಅನ್ನು ಕೇವಲ ಎರಡು ನಗರಗಳಲ್ಲಿ, ಪ್ರೇಕ್ಷಕರಿಲ್ಲದೆ ಆಯೋಜಿಸಲು ಪಾಕಿಸ್ತಾನ ಕ್ರಿಕೆಟ್ ಮಂಡಳಿಯು (ಪಿಸಿಬಿ) ನಿರ್ಧರಿಸಿದೆ ಎಂದು ವರದಿಯಾಗಿದೆ. ಮಧ್ಯಪ್ರಾಚ್ಯ ದೇಶಗಳಲ್ಲಿ ನಡೆಯುತ್ತಿರುವ ಸಂಘರ್ಷದಿಂದಾಗಿ ಇಂಧನ ಸಮಸ್ಯೆ ಉಂಟಾಗುತ್ತದೆ ಎಂಬ ಕಾರಣಕ್ಕೆ ಈ ನಿರ್ಧಾರ ಎಂದು ನಖ್ವಿ ಹೇಳಿಕೊಂಡಿದ್ದಾರೆ.

# ಹಜ್ ಯಾತ್ರಿಗಳಿಗಾಗಿ ಪ್ರತ್ಯೇಕ ಟರ್ಮಿನಲ್‌ಗಾಗಿ ಮನವಿ




ಬೆಂಗಳೂರು: ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹಜ್ ಯಾತ್ರೆಗೆ ತೆರಳುವ ಯಾತ್ರಿಕರಿಗೆ ಪ್ರಸಕ್ತ ವರ್ಷ ಪ್ರತ್ಯೇಕ ಟರ್ಮಿನಲ್ ಸೌಲಭ್ಯವನ್ನು ಮರುಸ್ಥಾಪಿಸುವ ಕುರಿತು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದೆ. ಈ ಕುರಿತು ವಿಧಾನಸಭೆಯ ಪ್ರಶ್ನೋತ್ತರ ಕಲಾಪದಲ್ಲಿ ಮಾಹಿತಿ ನೀಡಿದ ಹಜ್ ಸಚಿವ ರಹೀಂ ಖಾನ್ ಕಳೆದ ಎರಡು ವರ್ಷಗಳಿಂದ ಮಂಗಳೂರು ವಿಮಾನ ನಿಲ್ದಾಣದಲ್ಲಿ ಹಜ್‌ಯಾತ್ರಿಕರಿಗಾಗಿ ಪ್ರತ್ಯೇಕ ಟರ್ಮಿನಲ್ ವ್ಯವಸ್ಥೆಯನ್ನು ಕಲ್ಪಿಸಲು ಕೇಂದ್ರ ಸರ್ಕಾರವು ಅನುಮತಿ ನೀಡಿರಲಿಲ್ಲ ಎಂದು ತಿಳಿಸಿದರು.

# 'ಅನುಕಂಪದ ಆಧಾರದ ನೇಮಕಾತಿ' ವಾರಸುದಾರರ ಜನ್ಮಸಿದ್ಧ ಹಕ್ಕಲ್ಲ



ಬೆಂಗಳೂರು : ಸರ್ಕಾರಿ ನೌಕರರು ಸೇವೆಯಲ್ಲಿದ್ದಾಗ ಮೃತಪಟ್ಟರೆ ಅವರ ಕುಟುಂಬದವರಿಗೆ ನೀಡಲಾಗುವ 'ಅನುಕಂಪದ ಆಧಾರದ ನೇಮಕಾತಿ' ಎಂಬುದು ವಾರಸುದಾರರ ಜನ್ಮ ಸಿದ್ಧ ಹಕ್ಕಲ್ಲ ಅಥವಾ ಅದು ಪಿತ್ರಾರ್ಜಿತ ವಾಗಿ ಬರುವ ಉತ್ತರಾಧಿಕಾರದ ಹಕ್ಕಲ್ಲ ಎಂದು ಕರ್ನಾಟಕ ಹೈಕೋರ್ಟ್ ಸ್ಪಷ್ಟಪಡಿಸಿದೆ. ಅನುಕಂಪದ ನೇಮಕಾತಿಯ ಉದ್ದೇಶವು ಕುಟುಂಬದ ಯಜಮಾನನ ಸಾವಿನ ನಂತರ ಎದುರಾಗುವ ಹಠಾತ್ ಆರ್ಥಿಕ ಬಿಕ್ಕಟ್ಟಿನಿಂದ ಆ ಕುಟುಂಬವನ್ನು ರಕ್ಷಿಸುವುದೇ ಹೊರತು, ಅದನ್ನು ಕೆಲಸ ಪಡೆಯುವ ಹಕ್ಕಾಗಿ ಬಳಸಲಾಗದು ಎಂದು ಹೈ ಕೋರ್ಟ್ ಹೇಳಿದೆ.

# ಅಲ್ಪಸಂಖ್ಯಾತರಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ : ಡಿ.ಕೆ.ಶಿ



ಬೆಂಗಳೂರು : ಉಪಚುನಾವಣೆ ಟಿಕೆಟ್ ಹಂಚಿಕೆ ವಿಚಾರದಲ್ಲಿ ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅಲ್ಪಸಂಖ್ಯಾತರಲ್ಲಿ ಅಸಮಾಧಾನ ಇರುವ ಬಗ್ಗೆ ಮಾಧ್ಯಮಗಳ ಬಳಿ ಹೇಳಿಬರಹುದು. ಆದರೆ, ನಮ್ಮ ಬಳಿ ಏನೂ ಹೇಳಿಲ್ಲ. ಆದಾಗ್ಯೂ ಅವರಿಗೆ ಪರ್ಯಾಯ ವ್ಯವಸ್ಥೆಗಳನ್ನು ಮಾಡಲಾಗಿದೆ. ಪಕ್ಷದ ತೀರ್ಮಾನವೇ ಅಂತಿಮ ಎಂದು ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದರು. ಎಲ್ಲ ಅಲ್ಪಸಂಖ್ಯಾತ ನಾಯಕರು, ಎಐಸಿಸಿ ಕಾರ್ಯದರ್ಶಿಗಳ ಜತೆ ಮಾತನಾಡಿ ಒಮ್ಮತದ ತೀರ್ಮಾನಕ್ಕೆ ಬಂದೇ ಶಾಮನೂರು ಕುಟುಂಬಕ್ಕೆ ಅವಕಾಶ ಮಾಡಿಕೊಡಲಾಗಿದೆ ಎಂದರು.

# ಹೋಟೆಲ್ ಅಸೋಸಿಯೇಷನ್ ಸಲ್ಲಿಸಿದ್ದ ರಿಟ್ ಅರ್ಜಿ ವಜಾ



ಬೆಂಗಳೂರು : ರಾಜ್ಯದ ಹೋಟೆಲ್‌ಗಳಿಗೆ ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್‌ಗಳ ಪೂರೈಕೆಯಲ್ಲಿ ಆಗುತ್ತಿರುವ ತಾರತಮ್ಯ ಮತ್ತು ಕೊರತೆಯನ್ನು ನೀಗಿಸಬೇಕು ಎಂದು ಕೋರಿ ಬೆಂಗಳೂರು ಹೋಟೆಲ್ ಅಸೋಸಿಯೇಷನ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ವಜಾಗೊಳಿಸಿದೆ. ಅಂತಾರಾಷ್ಟ್ರೀಯ ಮಟ್ಟದ ಯುದ್ಧದ ಪರಿಸ್ಥಿತಿ ಮತ್ತು ಆಮದು-ರಫ್ತಿನ ವ್ಯತ್ಯಯಗಳ ಹಿನ್ನೆಲೆಯಲ್ಲಿ ಇಂತಹ ವಿಚಾರಗಳಲ್ಲಿ ನ್ಯಾಯಾಲಯ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ ಎಂದು ಪೀಠ ಅಭಿಪ್ರಾಯಪಟ್ಟಿದೆ.

# ಕರ್ನಾಟಕ ರಾಜ್ಯ ನಾಗರಿಕ ಸೇವೆಗಳು ಮಸೂದೆಗೆ ಅನುಮೋದನೆ



ಬೆಂಗಳೂರು : ಶಾಲೆಗಳನ್ನು ಮೂರು ವರ್ಗಗಳಾಗಿ ವಿಂಗಡಿಸಿ, ತುರ್ತು ಸೇವಾ ಗುಂಪು ಎಂದು ಪರಿಗಣಿಸಿ ಶಿಕ್ಷಕರ ವರ್ಗಾವಣೆ ಸ್ವರೂಪದಲ್ಲಿ ಆಮೂಲಾಗ್ರ ಬದಲಾವಣೆಗೆ ಅವಕಾಶ ಕಲ್ಪಿಸುವ 'ಕರ್ನಾಟಕ ರಾಜ್ಯ ನಾಗರಿಕ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಮಸೂದೆಗೆ ವಿಧಾನಸಭೆ ಅನುಮೋದನೆ ನೀಡಲಾಯಿತು. ಮಸೂದೆಯು ಶಿಕ್ಷಕರನ್ನು ಬೋಧಕೇತರ ಹುದ್ದೆಗಳಿಗೆ ವರ್ಗಾವಣೆ ಮಾಡುವುದನ್ನು ನಿಷೇಧಿಸುತ್ತದೆ. ಶಿಕ್ಷಕರ ಕೊರತೆಯನ್ನು ನೀಗಿಸುವುದು ಇದರ ಉದ್ದೇಶವಾಗಿದೆ. ಉಪನ್ಯಾಸಕರಿಗೆ ಮೊದಲ ವರ್ಗದ ಹುದ್ದೆಗಳ ಲಭ್ಯತೆ ಆಧಾರದಲ್ಲಿ ವರ್ಗಾವಣೆ ಕೋರಲು ಅವಕಾಶ ಕಲ್ಪಿಸಲಾಗಿದೆ.

# ಚಿನ್ನದ ಬೆಲೆಯಲ್ಲಿ ಭಾರಿ ಕುಸಿತ !



ಮಂಗಳೂರು:ಜಾಗತಿಕ ಮಾರುಕಟ್ಟೆಯಲ್ಲಿನ ಹಠಾತ್ ಬೆಳವಣಿಗೆಗಳು ಮತ್ತು ಆರ್ಥಿಕ ಸ್ಥಿತ್ಯಂತರದ ಹಿನ್ನೆಲೆಯಲ್ಲಿ ಇಂದು ಚಿನ್ನದ ದರದಲ್ಲಿ ಗಣನೀಯ ಕುಸಿತ ಕಂಡುಬಂದಿದೆ. ಕಳೆದ ಕೆಲವು ದಿನಗಳಿಂದ ಏರಿಳಿತ ಕಾಣುತ್ತಿದ್ದ ಹಳದಿ ಲೋಹದ ಬೆಲೆ ಇಂದು ಗ್ರಾಹಕರಿಗೆ ದೊಡ್ಡ ಮಟ್ಟದ ಸಮಾಧಾನ ತಂದಿದೆ. ಮಾರುಕಟ್ಟೆಯ ಇಂದಿನ ವಹಿವಾಟಿನ ಪ್ರಕಾರ 22 ಕ್ಯಾರೆಟ್ ಆಭರಣ ಚಿನ್ನದ ಬೆಲೆ ಪ್ರತಿ ಗ್ರಾಂಗೆ 12,435, ಅದೇ ರೀತಿ 24 ಕ್ಯಾರೆಟ್ ಅಪರಂಜಿ ಚಿನ್ನದ ದರ 13,565, ಇನ್ನು 18 ಕ್ಯಾರೆಟ್ ಚಿನ್ನದ ಬೆಲೆ ಪ್ರತಿ ಗ್ರಾಂಗೆ 10,000 ಗಿಂತಲೂ ಕೆಳಗೆ ಇಳಿದಿರುವುದು ಹೂಡಿಕೆದಾರರ ಗಮನ ಸೆಳೆದಿದೆ.

# ಭಾರತದ ತೈಲ ಸಂಗ್ರಹಣೆ ಕೇವಲ ಮೂರನೇ ಎರಡರಷ್ಟು ಭರ್ತಿ!



ನವದೆಹಲಿ : ತುರ್ತು ಪರಿಸ್ಥಿತಿಗಳು ಅಥವಾ ಬೆಲೆ ಏರಿಳಿತಗಳ ಸಂದರ್ಭಗಳಲ್ಲಿ ಸುಮಾರು 95 ದಿನಗಳ ಅವಧಿಗೆ ತೈಲ ಪೂರೈಕೆಯನ್ನು ನಿರ್ವಹಿಸಲು ರೂಪಿಸಲಾದ ಭಾರತದ ತಂತ್ರಜ್ಞಾನದ ತೈಲ ಸಂಗ್ರಹಣೆ ಈಗ ಕೇವಲ ಎರಡು-ಮೂರರಷ್ಟು ಮಾತ್ರ ಭರ್ತಿಯಾಗಿದೆ ಎಂದು ರಾಜ್ಯಸಭೆಗೆ ತಿಳಿಸಲಾಗಿದೆ. ಪ್ರಸ್ತುತ ಹಣಕಾಸು ವರ್ಷದಲ್ಲಿ ಮೊದಲ 11 ತಿಂಗಳಲ್ಲಿ ಭಾರತವು ಸುಮಾರು 226 ಮಿಲಿಯನ್ ಟನ್ ಕಚ್ಚಾ ತೈಲ ಆಮದು ಮಾಡಲು 110 ಬಿಲಿಯನ್ ಅಮೆರಿಕನ್ ಡಾಲರ್ ವೆಚ್ಚ ಮಾಡಿದೆ. ಪಾದೂರಿನ ಕಾಮಗಾರಿ 2025ರ ಆರಂಭವಾಗಿದೆ.

# ಭೀಕರ 'ಹಿಂದೂಗಳ ನರಮೇಧ' : ಪಾಕಿಸ್ತಾನ ಅಂತರರಾಷ್ಟ್ರೀಯ ಕಟಕಟೆಯಲ್ಲಿ



ಅಮೇರಿಕ : ಪಾಕಿಸ್ತಾನದ ಕರಾಳ ಇತಿಹಾಸವೊಂದು ಬರೋಬ್ಬರಿ 5 ದಶಕಗಳ ನಂತರ ಇಸ್ಲಾಮಾಬಾದ್‌ನ ನಿದ್ದೆಗೆಡಿಸಿದೆ! 55 ವರ್ಷಗಳ ಹಿಂದೆ ನಡೆದ ಆ ಭೀಕರ 'ಹಿಂದೂಗಳ ನರಮೇಧ' ಈಗ ಜಾಗತಿಕ ಮಟ್ಟದಲ್ಲಿ ಸದ್ದು ಮಾಡುತ್ತಿದ್ದು, ಪಾಕಿಸ್ತಾನವನ್ನು ಅಂತರರಾಷ್ಟ್ರೀಯ ಕಟಕಟೆಯಲ್ಲಿ ನಿಲ್ಲಿಸಿದೆ. ಅಂದು ಹರಿದ ಹಿಂದೂಗಳ ರಕ್ತಕ್ಕೆ ಇಂದು ನ್ಯಾಯ ಸಿಗುವ ಕಾಲ (Time) ಹತ್ತಿರ ಬಂದಿದೆಯೇ ಎಂಬ ಪ್ರಶ್ನೆ ಮೂಡಿದೆ. ಅಮೇರಿಕದಲ್ಲಿ 1971ರ ಬಾಂಗ್ಲಾದೇಶ ಹತ್ಯಾಕಾಂಡವನ್ನು ಮತ್ತೆ ಚರ್ಚೆಗೆ ತರುವ ಮಹತ್ವದ ಬೆಳವಣಿಗೆ ನಡೆದಿದೆ. ಗ್ರೆಗ್ ಲ್ಯಾಂಡ್ಸ್‌ಮೆನ್ ಅಮೆರಿಕ ಪ್ರತಿನಿಧಿಗಳ ಸಭೆಯಲ್ಲಿ ನಿರ್ಣಯವನ್ನು ಮಂಡಿಸಿದೆ.

# ಪೆಟ್ರೋಲ್, ಡೀಸೆಲ್, ಗ್ಯಾಸ್ ಪೂರೈಕೆಯಲ್ಲಿ ವ್ಯತ್ಯಯವಾಗಲ್ಲ -ಪ್ರಧಾನಿ



ನವದೆಹಲಿ : ದೇಶಾದ್ಯಂತ ಪೆಟ್ರೋಲ್, ಡೀಸೆಲ್ ಹಾಗೂ ಎಲ್‌ಪಿಜಿ ಗ್ಯಾಸ್ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗಲ್ಲ, ಜನರು ಆತಂಕಪಡುವ ಅಗತ್ಯವಿಲ್ಲ ಎಂದು ಸ್ಪಷ್ಟ ಭರವಸೆ ನೀಡಿದ್ದಾರೆ. ನಮ್ಮ ದೇಶಕ್ಕೆ ಬೇಕಾಗುವ ಅಡುಗೆ ಅನಿಲದ ಶೇ. 60ರಷ್ಟನ್ನು ನಾವು ಬೇರೆ ದೇಶಗಳಿಂದಲೇ ಆಮದು ಮಾಡಿಕೊಳ್ಳುತ್ತೇವೆ. ಆದರೂ, ಈ ಯುದ್ಧದ ಟೆನ್ಷನ್ ನಡುವೆಯೂ ಮನೆಮನೆಗೆ ಗ್ಯಾಸ್ ಆಗಲಿ, ವಾಹನಗಳಿಗೆ ಪೆಟ್ರೋಲ್, ಡೀಸೆಲ್ ಆಗಲಿ ಯಾವುದೇ ಅಡೆತಡೆಯಿಲ್ಲದೆ ಸರಬರಾಜು ಆಗುವಂತೆ ನಾವು ಪಕ್ಕಾ ಪ್ಲಾನ್ ಮಾಡಿದ್ದೇವೆ ಎಂದು ಪ್ರಧಾನಿ ಮೋದಿ ಸಂಸತ್ತಿನಲ್ಲಿ ಗುಡುಗಿದರು.

# ತಮಿಳುನಾಡಿನಲ್ಲಿ 234 ಸ್ಥಾನಗಳ ಪೈಕಿ ಬಿಜೆಪಿ ಸ್ಪರ್ಧೆ 27ರಲ್ಲಿ ಮಾತ್ರ



ಚೆನ್ನೈ : ಪಂಚ ರಾಜ್ಯ ಚುನಾವಣೆಗಳ ರಾಜ್ಯ ಗಳಲ್ಲಿ ಎನ್‌ಡಿಎಂ ಮೈತ್ರಿ ಪಕ್ಷಗಳ ಸೀಟು ಹಂಚಿಕೆ ಮಾತುಕತೆ ತೀವ್ರಗೊಂಡಿದೆ. ಇದೀಗ ತಮಿಳುನಾಡಿನಲ್ಲಿ ಎನ್‌ಡಿಎ ಮೈತ್ರಿ ಪಕ್ಷಗಳ ಸಭೆ ನಡೆಸಿ ಸೀಟು ಹಂಚಿಕೆ ಅಂತಿಮಗೊಳಿಸಿದೆ. 234 ಸ್ಥಾನಗಳ ಪೈಕಿ ಬಿಜೆಪಿ ಸ್ಪರ್ಧೆ ಮಾಡಲು ಸಿಕ್ಕಿದ ಸೀಟು ಕೇವಲ 27 ಮಾತ್ರ. ಅಣ್ಣಾಮಲೈ ತಮಿಳುನಾಡಿನಲ್ಲಿ ಬಿರುಗಾಳಿ ಎಬ್ಬಿಸಿದ್ದರು. ತಮಿಳುನಾಡಿನಲ್ಲಿ 2026ರ ಚುನಾವಣೆಯಲ್ಲೇ ಬಿಜೆಪಿ ಅಧಿಕಾರಕ್ಕೆ ಬರಲಿದೆ ಅನ್ನೋ ಮಾತುಗಳು ಕೇಳಿಬಂದಿತ್ತು. ಅಷ್ಟರಲ್ಲೇ ತಮಿಳುನಾಡು ಅಧ್ಯಕ್ಷ ಸ್ಥಾನದಿಂದ ಅಣ್ಣಾಮಲೈ ಕೆಳಗಿಳಿಯಬೇಕಾಯಿತು.

# ಪ್ರಧಾನಿ ಹೊಸದಾಗಿ ಏನೂ ಹೇಳಿಲ್ಲ: ಪ್ರಿಯಾಂಕ ವಾದ್ರಾ



ನವದೆಹಲಿ : ಪಶ್ಚಿಮ ಏಷ್ಯಾ ಸಂಘರ್ಷದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಲೋಕಸಭೆಯಲ್ಲಿ ಹೊಸದಾಗಿ ಏನನ್ನೂ ಹೇಳಿಲ್ಲ. ಅದೇ ಹಳೆಯ ವಿಷಯಗಳನ್ನೇ ಮತ್ತೆ ಮತ್ತೆ ಹೇಳಿದ್ದಾರೆ ಎಂದು ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ಹೇಳಿದ್ದಾರೆ. ಸಂಸತ್ ಆವರಣದಲ್ಲಿ ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಪ್ರಿಯಾಂಕಾ ಗಾಂಧಿ, 'ಕೊಲ್ಲಿ ರಾಷ್ಟ್ರದಲ್ಲಿನ ಯುದ್ಧದ ಪರಿಸ್ಥಿತಿಯ ಬಗ್ಗೆ ಪ್ರಧಾನಿ ಮಾತನಾಡಿದ್ದಾರೆ. ಪಶ್ಚಿಮ ಏಷ್ಯಾ ಸಂಘರ್ಷದ ಕುರಿತು ಎಲ್ಲರ ಅಭಿಪ್ರಾಯವು ಕೂಡ ಮುಖ್ಯವಾಗಿದೆ ಹೊಸದೇನೂ ಇಲ್ಲ' ಎಂದಿದ್ದಾರೆ.

# ಪಾಕಿಸ್ತಾನವು ಭಾರತದ ದಾಳಿ ನಡೆಸಲಿದೆ : ಅಬ್ದುಲ್ ಬಾಸಿತ್



ನವದೆಹಲಿ : ಪಶ್ಚಿಮ ಏಷ್ಯಾದಲ್ಲಿ ಉಲ್ಬಣಿಸಿರುವ ಯುದ್ಧದ ಭೀತಿಯ ನಡುವೆ, ಭಾರತದಲ್ಲಿದ್ದ ಪಾಕಿಸ್ತಾನದ ಮಾಜಿ ಹೈಕಮಿಷನರ್ ಅಬ್ದುಲ್ ಬಾಸಿತ್ ಅವರು ಅತ್ಯಂತ ವಿವಾದಾತ್ಮಕ ಮತ್ತು ಆಘಾತಕಾರಿ ಹೇಳಿಕೆಯೊಂದನ್ನು ನೀಡಿದ್ದಾರೆ. ಒಂದು ವೇಳೆ ಅಮೆರಿಕವು ಪಾಕಿಸ್ತಾನದ ಮೇಲೆ ಅಥವಾ ಅದರ ಪರಮಾಣು ನೆಲೆಗಳ ಮೇಲೆ ದಾಳಿ ನಡೆಸಿದರೆ, ಪಾಕಿಸ್ತಾನವು ಭಾರತದ ದೆಹಲಿ ಮತ್ತು ಮುಂಬೈ ನಗರಗಳನ್ನು ಗುರಿಯಾಗಿಸಿ ದಾಳಿ ನಡೆಸಲಿದೆ ಎಂದು ಅವರು ಬೆದರಿಕೆ ಹಾಕಿದ್ದಾರೆ. ಅವರ "ಜಿಹಾದಿ ಮಾನಸಿಕತೆ"ಯನ್ನು ತೋರಿಸುತ್ತದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ.



ಕರಾವಳಿ ತರಂಗಿಣಿ

# ಕಲಾ ತರಂಗಿಣಿ



## 'ಕ್ಯಾಲೆಂಡರ್' ಟ್ರೇಲರ್ ಬಿಡುಗಡೆ

ಈ ಹಿಂದೆ 'ಸ್ವಾರ್ಥ ರತ್ನ' ಸೇರಿದಂತೆ ಎರಡು ಸಿನಿಮಾಗಳಲ್ಲಿ ನಾಯಕನಾಗಿ ನಟಿಸಿದ್ದ ಆದರ್ಶ ಗುಂಡುರಾಜ್ ಅಭಿನಯದ 'ಕ್ಯಾಲೆಂಡರ್' ಚಿತ್ರದ ಟ್ರೇಲರ್ ಯುಗಾದಿ ಹಬ್ಬದ ಸಂದರ್ಭದಲ್ಲಿ ಬಿಡುಗಡೆಯಾಗಿದೆ. ಚಿತ್ರ ಏಪ್ರಿಲ್ 3ರಂದು ಬಿಡುಗಡೆಯಾಗಲಿದೆ. ಟ್ರೇಲರ್ ಬಿಡುಗಡೆ ನಂತರ ಚಿತ್ರತಂಡದ ಸದಸ್ಯರು ಮಾತನಾಡಿದರು. ಯುಗಾದಿ ಎಂದರೆ ಹೊಸವರ್ಷ ಆರಂಭ. ಈ ಸಂದರ್ಭದಲ್ಲಿ 'ಕ್ಯಾಲೆಂಡರ್' ಚಿತ್ರದ ಟ್ರೇಲರ್ ಬಿಡುಗಡೆಯಾಗುತ್ತಿರುವುದು ವಿಶೇಷ. ಇದೊಂದು ಮಹಿಳಾ ಪ್ರಧಾನ ಚಿತ್ರ. ಕುಟುಂಬ ಸಮೇತ ನೋಡಲೇಬೇಕಾದ ಚಿತ್ರವೂ ಹೌದು. ನನ್ನದು ಈ ಚಿತ್ರದಲ್ಲಿ ವೈದ್ಯನ ಪಾತ್ರ. ಬಹು ತಾರಾಗಣದ ಈ ಚಿತ್ರದಲ್ಲಿ ನಿವಿಷ್ಕ ಪಾಟೀಲ್ ಹಾಗೂ ಸುಶ್ಮಿತ ನಾಯಕಿಯರಾಗಿ ನಟಿಸಿದ್ದಾರೆ. ಕನಸಿನ ರಾಣಿ ಮಾಲಾಶ್ರೀ ಅವರು ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದಾರೆ. ರಮೇಶ್ ಇಂದಿರಾ, ಪ್ರಮೋದ್ ಶೆಟ್ಟಿ, ಪ್ರಕಾಶ್ ತುಮ್ಮಿನಾಡು, ಸುಚೇಂದ್ರ ಪ್ರಸಾದ್, ಚಂದ್ರಪ್ರಭ ಮುಂತಾದವರು ತಾರಾಬಳಗದಲ್ಲಿದ್ದಾರೆ. ಸುನಾದ್ ಗೌತಮ್ ಸಂಗೀತ ನೀಡಿದ್ದಾರೆ. ರಮೇಶ್ ಕೊಯಿರಾ ಛಾಯಾಗ್ರಹಣ, ಕೆ.ಜಿ.ಎಫ್ ಖ್ಯಾತಿಯ ವಿಕ್ರಂ ಮೋರ್ ಸಾಹಸ ನಿರ್ದೇಶನ, ಭಜರಂಗಿ ಮೋಹನ್ ನೃತ್ಯ ನಿರ್ದೇಶನ, ಸುರೇಶ್ ಆರ್ಮುಗಂ ಸಂಕಲನ ಹಾಗೂ ಮಹಾಂತೇಶ್ ಆರ್ ಅವರ ಸಹ ನಿರ್ದೇಶನವಿರುವ ಈ ಚಿತ್ರಕ್ಕೆ ಕಥೆ ನಾನೇ ಬರೆದಿದ್ದು, ನವೀನ್ ಶಕ್ತಿ ನಿರ್ದೇಶನ ಮಾಡಿದ್ದಾರೆ. ಏಪ್ರಿಲ್ ಮೂರರಂದು ನಮ್ಮ ಚಿತ್ರ ಬಿಡುಗಡೆಯಾಗುತ್ತಿದ್ದು, ಹೆಸರಾಂತ ವಿ.ಕೆ.ಫಿಲಂಸ್ ವಿತರಣೆ ಮಾಡುತ್ತಿದೆ. ಹಿಂದಿಯಲ್ಲೂ ನಮ್ಮ ಚಿತ್ರ ಡಬ್ ಆಗಿ ಬಿಡುಗಡೆಯಾಗುತ್ತಿದೆ. ಇತ್ತೀಚೆಗೆ ಮುಂಬೈನಲ್ಲೂ ಸಹ ಈ ಚಿತ್ರದ ಪತ್ರಿಕಾಗೋಷ್ಠಿ ಆಯೋಜಿಸಲಾಗಿತ್ತು ಎಂದು ನಿರ್ಮಾಪಕ ಹಾಗೂ ನಾಯಕ ಆದರ್ಶ ಗುಂಡುರಾಜ್ ಹೇಳಿದರು. ನಾನು ಮೂಲತಃ ರಂಗಭೂಮಿಯವನು. 5000ಕ್ಕೂ ಅಧಿಕ ಬೀದಿ ನಾಟಕಗಳನ್ನು ಮಾಡಿದ್ದೇನೆ. ನಿರ್ದೇಶಕನಾಗಿ ಇದು ಮೊದಲ ಚಿತ್ರ. 'ಕ್ಯಾಲೆಂಡರ್' ಎಲ್ಲರ ಮನಸ್ಸಿಗೂ ಹತ್ತಿರವಾಗುವ ಚಿತ್ರವಾಗಲಿದೆ ಎಂದರು..



## ರಾಮನವಮಿಗೆ 'ಮಹರ್ಷಿ ವಾಲ್ಮೀಕಿ' ಕಿರುಚಿತ್ರ

ಬೇಡನಾಗಿದ್ದ ರತ್ನಕಾರ, ಋಷಿಗಳ ಉಪದೇಶದಿಂದ ಮಹರ್ಷಿ ವಾಲ್ಮೀಕಿಯಾಗಿದ್ದು ಎಲ್ಲರಿಗೂ ತಿಳಿದ ಸಂಗತಿ. ಕ್ರೌಂಚ ಪಕ್ಷಿಯ ಸಾವನ್ನು ಕಣ್ಣಾರೆ ಕಂಡ ವಾಲ್ಮೀಕಿ ಮಹರ್ಷಿಗಳಿಗೆ ಆ ಘಟನೆ ರಾಮಾಯಣ ಬರೆಯಲು ಸ್ಫೂರ್ತಿಯಾಯಿತು. ಅದು ವಾಲ್ಮೀಕಿ ರಾಮಾಯಣ ಎಂದೇ ಪ್ರಸಿದ್ಧವಾಯಿತು. ಅಂತಹ ವಾಲ್ಮೀಕಿ ಋಷಿಗಳ ಜೀವನ ಚರಿತ್ರೆಯನ್ನು ಕಿರುಚಿತ್ರದ ಮೂಲಕ ಹೊರತಂದಿದ್ದಾರೆ ನಿರ್ದೇಶಕ ಪ್ರವೀಣ್ ಶಿವಣ್ಣ. 21 ನಿಮಿಷಗಳಲ್ಲಿ ಅದ್ಭುತವಾಗಿ ಮೂಡಿಬಂದಿರುವ ಈ ಕಿರುಚಿತ್ರಕ್ಕೆ 'ಮಹರ್ಷಿ ವಾಲ್ಮೀಕಿ' ಎಂದು ಹೆಸರಿಟ್ಟಿದ್ದಾರೆ. ರತ್ನದಾಸ್ ಅವರ ನಿರ್ಮಾಣದ ಈ ಕಿರುಚಿತ್ರದ ಅನಾವರಣ ಹಾಗೂ ಪತ್ರಿಕಾಗೋಷ್ಠಿ ಇತ್ತೀಚೆಗೆ ನೆರವೇರಿತು. ರಾಮನವಮಿ ಸಂದರ್ಭದಲ್ಲೇ ಈ ಕಿರುಚಿತ್ರ ಅನಾವರಣವಾಗಿದ್ದು ವಿಶೇಷ. ಶ್ರೀರಿಷಿ ಅವಿರ್ಭವ ಗುರು ಪೂರ್ಣದೈತ್ರಿ, ರಾಷ್ಟ್ರ ಪ್ರಶಸ್ತಿ ವಿಜೇತ ಸಂಕಲನಕಾರ ಸುರೇಶ್ ಅರಸ್, ನಟ ಗಣೇಶ್ ರಾವ್ ಕೇಸರ್ಕರ್, ಪದ್ಮಶ್ರೀ ವೆಂಕಟೇಶ್ ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಪ್ರದರ್ಶನದ ನಂತರ ತಂಡದ ಸದಸ್ಯರು ಹಾಗೂ ಗಣ್ಯರು ಮಾತನಾಡಿದರು. ನಾನು ಸಂಕಲನಕಾರನಾಗಿ ಸಾಕಷ್ಟು ಚಿತ್ರಗಳಿಗೆ ಕಾರ್ಯ ನಿರ್ವಹಿಸಿದ್ದೇನೆ. ನಿರ್ದೇಶಕನಾಗಿ ಇದು ಮೊದಲ ಕಿರುಚಿತ್ರ. ನಿರ್ಮಾಪಕರ, ಕಲಾವಿದರ ಹಾಗೂ ತಂತ್ರಜ್ಞರ ಸಹಕಾರದಿಂದ 'ಮಹರ್ಷಿ ವಾಲ್ಮೀಕಿ' ಕಿರುಚಿತ್ರ ಉತ್ತಮವಾಗಿ ಮೂಡಿ ಬಂದಿದೆ. ಚಿಕ್ಕಮಗಳೂರು ಸುತ್ತಮುತ್ತ ಚಿತ್ರೀಕರಣ ನಡೆದಿದೆ. ಈ ಕಿರುಚಿತ್ರ ಅನಾವರಣ ಮಾಡಿಕೊಟ್ಟ ಗಣ್ಯರಿಗೆ ಧನ್ಯವಾದ ಎಂದರು ನಿರ್ದೇಶಕ ಪ್ರವೀಣ್ ಶಿವಣ್ಣ. ರಾಮ ಹದಿನಾಲ್ಕು ವರ್ಷಗಳ ವನವಾಸ ಮುಗಿಸಿ ಬಂದ ಹಾಗೆ. ನಾನು ಕೂಡ ನಟನೆ ಮಾಡಲು ಹದಿನಾಲ್ಕು ವರ್ಷಗಳು ಬೇಕಾಯಿತು. ಅದು ರಾಮಭಕ್ತ "ಮಹರ್ಷಿ ವಾಲ್ಮೀಕಿ" ಅವರ ಕಥೆಯ ಮೂಲಕವೇ ಆಗಿರುವುದು ಕಾಕತಾಳೀಯ ಎಂದರು.



## 'ಯಾವ ಮೋಹನ ಮುರಳಿ ಕರೆಯಿತು' ಮಾರ್ಚ್ 27ರಂದು ತೆರೆಗೆ

ಪ್ರಕೃತಿ ಪ್ರೊಡಕ್ಷನ್ ಬ್ಯಾನರ್ ನಲ್ಲಿ ಶರಣಪ್ಪ ಗೌರಮ್ಮ ಮೊದಲಬಾರಿಗೆ ನಿರ್ಮಾಣ ಮಾಡಿರುವ 'ಯಾವ ಮೋಹನ ಮುರಳಿ ಕರೆಯಿತು' ಸಿನಿಮಾ ಬಿಡುಗಡೆಗೆ ದಿನಗಣನೆ ಆರಂಭವಾಗಿದ್ದು, ಇದೇ ಮಾರ್ಚ್ 27ರಂದು ರಾಜ್ಯಾದ್ಯಂತ ಬಿಡುಗಡೆ ಆಗುತ್ತಿದೆ. ಹಾಗಾಗಿ ಇತ್ತೀಚೆಗೆ ಈ ಚಿತ್ರದ ಟ್ರೇಲರ್ ಬಿಡುಗಡೆ ಆಗಿದ್ದು ಜಾಲತಾಣದಲ್ಲಿ ಪ್ರೇಕ್ಷಕರಿಂದ ಪ್ರಶಂಸೆ ಪಡೆಯುತ್ತಿದೆ. ರಷ್ಯಾದಲ್ಲಿ ನಡೆದ ಇಂಟರ್ ನ್ಯಾಷನಲ್ ಕಿಕ್ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಮೆಡಲ್ ಪಡೆದಿರುವ ಶರಣಪ್ಪ ಅವರು ವೃತ್ತಿಯಲ್ಲಿ ವಕೀಲರು. ರಿಯಲ್ ಎಸ್ಟೇಟ್ ಉದ್ಯಮಿಗಳು ಆಗಿದ್ದಾರೆ. ಟ್ರೇಲರ್ ರಿಲೀಸ್ ಕಾರ್ಯಕ್ರಮದಲ್ಲಿ ಮಾತನಾಡಿದ ನಿರ್ಮಾಪಕರು, 'ಮಗಳಿಗಾಗಿ ಈ ಸಿನಿಮಾ ಮಾಡಿದ್ದು ಕಥೆ ಚನ್ನಾಗಿ ಇತ್ತು. ಹಾಗಾಗಿ ನಿರ್ಮಾಣ ಮಾಡಿದೆ. 10 ದಿನ ಶೂಟಿಂಗ್ ಬಾಕಿ ಇರುವಾಗ ಚಿತ್ರದಲ್ಲಿ ನಟಿಸಿರುವ ರಾಕಿ ಎಂಬ ನಾಯಿ ಆಕಸ್ಮಿಕವಾಗಿ ನಡೆದ ಆಕ್ಸಿಡೆಂಟ್‌ನಲ್ಲಿ ನಿಧನವಾಯಿತು. ಚಿಕ್ಕವನಾಗಿದ್ದ ರಾಣಾ ನಾಯಿ ದೊಡ್ಡದು ಆಗುವವರೆಗೂ ಕಾದು ಕ್ಲೈಮ್ಯಾಕ್ಸ್ ಶೂಟ್ ಮಾಡಿದ್ದೆವು. ನಾಯಿ ಪ್ರೇಮಿಗಳಿಗೆ ಈ ಸಿನಿಮಾ ತುಂಬಾ ಇಷ್ಟ ಆಗುತ್ತದೆ. ಸೆಂಟಿಮೆಂಟ್, ಸಸ್ಪೆನ್ಸ್, ಥ್ರಿಲ್ಲರ್ ಹಾಗೂ ಫ್ಯಾಮಿಲಿ ಕಥೆಯ ಸಿನಿಮಾವಿದು. ಮುಂದಿನ ದಿನಗಳಲ್ಲಿ ಕಿಕ್ ಬಾಕ್ಸಿಂಗ್ ಕುರಿತಾದ ಸಿನಿಮಾ ಮಾಡುವ ಪ್ಲ್ಯಾನ್ ಇದ್ದು, ಹೊಸಬರಿಗೆ ಸಿನಿಮಾ ಮಾಡಲು ರೆಡಿಯಾಗಿದ್ದೇನೆ. ಈಗಾಗಲೇ ಇನ್ನೆರಡು ಸಿನಿಮಾಗಳ ಕೆಲಸ ಮುಗಿದಿದ್ದು ಸದ್ಯದಲ್ಲೇ ಅಪ್ ಡೇಟ್ ಕೊಡುತ್ತೇನೆ' ಎಂದು ಹೇಳಿದರು. ನಂತರ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ವಿಶ್ವಾಸ್ ಕೃಷ್ಣ ಇದು ನನ್ನ ನಿರ್ದೇಶನದ ಮೊದಲ ಚಿತ್ರ ಎಂದರು.



## ಮೇ 30ರಂದು 'ಕ್ರೇಜಿ ಬ್ರಹ್ಮ'

ಕನ್ನಡ ಚಿತ್ರರಂಗ ಕಂಡ ಅದ್ಭುತ ತಂತ್ರಜ್ಞ ಜೋಡಿ ಎಂದರೆ ರವಿಚಂದ್ರನ್ ಮತ್ತು ಹಂಸಲೇಖ ಅವರದ್ದು. 80-90ರ ದಶಕದಲ್ಲಿ ರವಿಚಂದ್ರನ್ ನಿರ್ದೇಶನದ ಮತ್ತು ಹಂಸಲೇಖ ಸಂಗೀತ ನಿರ್ದೇಶನದ ಚಿತ್ರಗಳು ದೊಡ್ಡ ಮಟ್ಟಿಗೆ ಯಶಸ್ಸು ಕಂಡಿದ್ದು ಎಲ್ಲರಿಗೂ ಗೊತ್ತೇ ಇದೆ. ಈ ಜೋಡಿಯ ಹೆಸರೇ ಸಾಕಾಗಿತ್ತು, ಒಂದು ಚಿತ್ರಕ್ಕೆ ಪ್ರೇಕ್ಷಕರನ್ನು ಸೆಳೆಯುವುದಕ್ಕೆ. ಅಂಥ ಜನಪ್ರಿಯ ಮತ್ತು ಯಶಸ್ವಿ ಜೋಡಿಯು, 2000ದ ನಂತರ ಕಾರಣಾಂತರಗಳಿಂದ ಜೊತೆಯಾಗಿ ಕೆಲಸ ಮಾಡದಿರಬಹುದು. ಆದರೆ, ಇಂದಿಗೂ ಅವರು ಮಾಡಿದ ಹಾಡುಗಳ ಮೋಡಿಯಿಂದ ಕನ್ನಡಿಗರು ಹೊರಬರುವುದಕ್ಕೆ ಸಾಧ್ಯವಾಗಿಲ್ಲ. ರವಿಚಂದ್ರನ್ ಮತ್ತು ಹಂಸಲೇಖ ಈಗ ಜೊತೆಯಾಗಿ ಕೆಲಸ ಮಾಡದಿದ್ದರೂ, ಅವರನ್ನು ಸಂಭ್ರಮಿಸುವ ಕೆಲಸ ನಡೆಯುತ್ತಿದೆ. ಇಬ್ಬರ ನಾಲ್ಕು ದಶಕಗಳ ಪಯಣವನ್ನು ಸಂಭ್ರಮಿಸುವ ಸಲುವಾಗಿ, ಪ್ರಸ್ತುತ ಇನ್ನೋವೇಟಿವ್ ಸಂಸ್ಥೆ ಮೇ 30ರಂದು ಸಂಜೆ 6ರಿಂದ ರಾತ್ರಿ 12ರವರೆಗೂ 'ಕ್ರೇಜಿ ಬ್ರಹ್ಮ' ಎಂಬ ಬೃಹತ್ ಕಾರ್ಯಕ್ರಮವನ್ನು ಆಯೋಜಿಸಿದೆ. Where Music Meets Magic ಎಂಬ ಅಡಿಬರಹವಿರುವ ಈ ಕಾರ್ಯಕ್ರಮದಲ್ಲಿ ರವಿಚಂದ್ರನ್ ಮತ್ತು ಹಂಸಲೇಖ ಜೋಡಿ ಯ ಕೆಲವು ಪ್ರಮುಖವಾದ ಹಾಡುಗಳನ್ನು ಹಾಡುವುದರ ಜೊತೆಗೆ ಮರುಸೃಷ್ಟಿ ಮಾಡಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ದಕ್ಷಿಣ ಭಾರತದ ಹಲವು ಜನಪ್ರಿಯ ಕಲಾವಿದರು ಭಾಗವಹಿಸುವುದರ ಜೊತೆಗೆ, ರವಿಚಂದ್ರನ್ ಅವರ ಜೊತೆಗೆ ನಟಿಸಿದ ಹಲವು ನಟಿಯರು ಭಾಗವಹಿಸಲಿದ್ದಾರೆ. ದೇಶದ ಜನಪ್ರಿಯ ಗಾಯಕರು ಹಾಡುಗಳನ್ನು ಹಾಡಲಿದ್ದಾರೆ. ಆರು ತಾಸುಗಳ ಈ ಬೃಹತ್ ಕಾರ್ಯಕ್ರಮವು ಕೆಂಗೇರಿಯ ಜೆಕೆ ಗ್ರಾಂಡ್ ಅರೇನಾದಲ್ಲಿ ನಡೆಯಲಿದೆ. ಈ ಕಾರ್ಯಕ್ರಮ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ನೀಡುವ ಸಲುವಾಗಿ ಶುಕ್ರವಾರ ರಾತ್ರಿ ಕಿಂಗ್ಸ್ ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿ ಆಯೋಜಿಸಲಾಗಿತ್ತು.



## ಏಪ್ರಿಲ್ 10ಕ್ಕೆ ಟೋವಿನೋ ಥಾಮಸ್ ತೆರೆಗೆ ಎಂಟ್ರಿ

ಮಲಯಾಳಂ ಬಹು ನಿರೀಕ್ಷಿತ ಪಳ್ಳಿಚಟ್ಟಂಬಿ ಸಿನಿಮಾ ಬಿಡುಗಡೆಗೆ ಸಿದ್ಧವಾಗಿದೆ. ಏಪ್ರಿಲ್ 10 ರಂದು ವಿಶ್ವದಾದ್ಯಂತ ಚಿತ್ರಮಂದಿರಗಳಿಗೆ ಎಂಟ್ರಿ ಕೊಡ್ತಿದೆ. ಇದೀಗ ಪಳ್ಳಿಚಟ್ಟಂಬಿ ಚಿತ್ರದ ಟೀಸರ್ ಬಿಡುಗಡೆ ಮಾಡಲಾಗಿದೆ. ಟೀಸರ್ ನಲ್ಲಿ ಭರಪೂರ ಆಕ್ಷನ್ ದೃಶ್ಯಗಳಿದ್ದು, ಮಲಯಾಳಂ ಚಿತ್ರರಂಗದಲ್ಲಿ ಈ ಚಿತ್ರ ಮತ್ತೊಂದು ಮೈಲಿಗಲ್ಲು ಸೃಷ್ಟಿಸುವ ನಂಬಿಕೆ ಚಿತ್ರತಂಡದಲ್ಲಿದೆ. ಡಿಜೋ ಜೋಸ್ ಆಂಟೋನಿ ಪಳ್ಳಿಚಟ್ಟಂಬಿ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. ಟೊವಿನೋ ಥಾಮಸ್ ನಾಯಕನಾಗಿ, ಕಯಾದು ಲೋಹರ್ ನಾಯಕಿಯಾಗಿ ನಟಿಸಿದ್ದಾರೆ. ವಿಜಯರಾಘವನ್, ಸುಧೀರ್ ಕರಮನ, ಬಾಬುರಾಜ್, ವಿನೋದ್ ಕೆದಮಂಗಲಂ, ಪ್ರಶಾಂತ್ ಅಲೆಕ್ಸಾಂಡರ್ ಮತ್ತು ಇತರ ಹಲವಾರು ತಾರಾಗಣದಲ್ಲಿದ್ದಾರೆ. 1950-60ರ ದಶಕದ ಸುತ್ತ ಕಥೆಯನ್ನು ಎಣೆಯಲಾಗಿದೆ. ವರ್ಲ್ಡ್‌ವೈಡ್ ಫಿಲ್ಮ್ಸ್ ಮತ್ತು ಸಿ ಕ್ಯೂಬ್ ಬ್ರದರ್ಸ್ ಎಂಟರ್ಟೈನ್ಮೆಂಟ್ ಬ್ಯಾನರ್ ನಡಿ ಪಳ್ಳಿಚಟ್ಟಂಬಿ ಸಿನಿಮಾವನ್ನು ನೌಫಲ್ ಮತ್ತು ಬ್ರಿಜೇಶ್ ನಿರ್ಮಿಸಿದ್ದಾರೆ. ಇದು ಐದು ಭಾಷೆಯಲ್ಲಿ ಚಿತ್ರ ಬಿಡುಗಡೆಯಾಗಲಿದೆ.



## ಗಿರಿರಾಜ್ ಸಾರಥ್ಯದ ರಾಮರಸ

ಕನ್ನಡ ಚಿತ್ರರಂಗದ ಖ್ಯಾತ ನಿರ್ಮಾಣ ಸಂಸ್ಥೆಯಾದ ಜಿ ಸಿನಿಮಾಸ್ ಗುರು ದೇಶಪಾಂಡೆ ಪ್ರೊಡಕ್ಷನ್ಸ್ ಮತ್ತು ಸೆವೆನ್ ಸ್ಟಾರ್ ಮೂವೀಸ್ ಜಂಟಿಯಾಗಿ ನಿರ್ಮಿಸುತ್ತಿರುವ ಮೈಥಿಕಲ್ ಫ್ಯಾಂಟಸಿ ಡ್ರಾಮಾ ಹಿನ್ನೆಲೆಯ ಅದ್ದೂರಿ ಸಿನಿಮಾ 'ರಾಮರಸ' ಈಗ ಮತ್ತೊಂದು ಕುತೂಹಲಕಾರಿ ಅಪ್‌ಡೇಟ್ ನೀಡುತ್ತಿದೆ. ಬ್ಲಾಕ್‌ಬಸ್ಟರ್ ಸಿನಿಮಾ 'ರಾಜಾಹುಲಿ' ನಿರ್ದೇಶಕರಾದ ಗುರು ದೇಶಪಾಂಡೆ ಅವರ ನಿರ್ಮಾಣದಲ್ಲಿ ಹಾಗೂ ಜಟ್ಟ, 'ಮೈತ್ರಿ' ಖ್ಯಾತಿಯ 2 ಸ್ಟೇಟ್ ಅವಾರ್ಡ್ ನಿರ್ದೇಶಕರು ಬಿ.ಎಂ.ಗಿರಿರಾಜ್ ಸಾರಥ್ಯದಲ್ಲಿ ಮೂಡಿಬರುತ್ತಿರುವ ಈ ಚಿತ್ರದ ಪ್ರಜ್ವಲ್ ದೇವರಾಜ್ ಅಭಿನಯದ ವಿಶೇಷ ಪೋಸ್ಟರ್ ಬಿಡುಗಡೆ ಮಾಡಲಾಗುವುದು. ಡೈನಾಮಿಕ್ ಪ್ರಿನ್ಸ್ ಪ್ರಜ್ವಲ್ ದೇವರಾಜ್ -'ಗುರು ಸಿದ್ಧ': ಈ ಚಿತ್ರದಲ್ಲಿ ಅತ್ಯಂತ ಶಕ್ತಿಯುತ ಹಾಗೂ ವಿಭಿನ್ನವಾದ 'ಗುರು ಸಿದ್ಧ' ಎಂಬ ಪಾತ್ರದಲ್ಲಿ ಡೈನಾಮಿಕ್ ಪ್ರಿನ್ಸ್ ಪ್ರಜ್ವಲ್ ದೇವರಾಜ್ ಕಾಣಿಸಿಕೊ ಳ್ಳುತ್ತಿದ್ದಾರೆ. ಕರ್ನಾಟಕದ ಅಲೆಮಾರಿ ಪರಂ ಪರೆಯಾದ 'ಸುಡುಗಾಡು ಸಿದ್ಧ' ಸಮುದಾಯದ ಹಿನ್ನೆಲೆಯನ್ನು ಈ ಪಾತ್ರ ಹೊಂದಿದೆ.



## ನಾನು ಕರುಣಾಕರ ಚಿತ್ರದ ಆಡಿಯೋ-ಟ್ರೈಲರ್ ಬಿಡುಗಡೆ

ನಿರ್ದೇಶಕ ಕಮ್ ನಟ ಆರ್ಯನ್ ತೇಜಸ್ ಇದೀಗ 'ನಾನು ಕರುಣಾಕರ' ಎಂಬ ತಂದೆ ಮಗನ ನಡುವಿನ ಬಾಂಧವ್ಯದ ಕಥೆಯನ್ನು ತೆರೆಗೆ ತರ್ತಿದ್ದಾರೆ. ರಂಗಭೂಮಿ ಹಿನ್ನೆಲೆಯಿಂದ ಬಂದ ಆರ್ಯನ್ ತೇಜಸ್ ಈ ಚಿತ್ರ ನಿರ್ದೇಶನದ ಜತೆಗೆ ನಾಯಕನ ಪಾತ್ರದಲ್ಲೂ ಕಾಣಿಸಿಕೊಂಡಿದ್ದಾರೆ. ಈ ಹಿಂದೆ ಶಿಕ್ಷಣ ವ್ಯವಸ್ಥೆಯ ಸುತ್ತ ನಡೆಯುವ ಕಥೆ ಹೊಂದಿದ 'ಪಾರ್ಕ್ ರೋಡ್ 100 ರೂಪಾಯಿ' ಚಿತ್ರ ನಿರ್ದೇಶಿಸಿದ್ದ ಆರ್ಯನ್ ತೇಜಸ್, ಕೊರೊನಾಗೂ ಮೊದಲೇ ಈ ಕಥೆಯನ್ನು ರೆಡಿ ಮಾಡಿಕೊಂಡಿದ್ದರಂತೆ. ನಂತರ ಅದನ್ನು ಸ್ನೇಹಿತ ನಮನ್ ನಾರಾಯಣ್ ಅವರಿಗೆ ಹೇಳಿದಾಗ ಅವರಿಗದು ಇಷ್ಟವಾಗಿ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಕನ್ನಡಕ್ಕೊಂದು ಒಳ್ಳೆಯ ಸಿನಿಮಾ ಕೊಡಬೇಕೆಂಬ ನಿಟ್ಟಿನಲ್ಲಿ ಸ್ನೇಹಿತರಾದ ವೈಭವ್ ಸುರೇಶ್, ಸೇರಿ ಈ ಚಿತ್ರ ನಿರ್ಮಾಣ ಮಾಡಿದ್ದಾರೆ. ಸಂತೋಷ್ ಮತ್ತು ಶ್ರೀಕಾಂತ್ ಇವರ ಜತೆ ಕೈಜೋಡಿಸಿದ್ದಾರೆ. ಈ ಚಿತ್ರದ ಟ್ರೈಲರ್ ಮತ್ತು ಹಾಡುಗಳ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ನಾನು ಕರುಣಾಕರ ಪ್ರತಿಯೊಬ್ಬರ ಜೀವನಕ್ಕೂ ಕನೆಕ್ಟ್ ಆಗುವಂಥ ಚಿತ್ರ. ಅಪ್ಪ ಮಗನ ಬಾಂಧವ್ಯ, ಗಂಡ ಹೆಂಡತಿಯ ಸಂಬಂಧದ ಸುತ್ತ ನಡೆಯೋ ಕಥೆ ಇದಾಗಿದೆ.



## ದೇವಿ ಮಹಾತ್ಮೆ ಸಿನಿಮಾದ ಫಸ್ಟ್ ಶೆಡ್ಯೂಲ್ ಕಂಪ್ಲೀಟ್

ಉಡುಪಿ ಜಿಲ್ಲೆಯ ಕಮಲಶಿಲೆಯ ಬ್ರಹ್ಮಿ ದೇಗುಲದಲ್ಲಿ ಮುಹೂರ್ತ ನೆರವೇರಿಸಿದ್ದ ದೇವಿ ಮಹಾತ್ಮೆ ಸಿನಿಮಾ ತಂಡ ಇದೀಗ ಮೊದಲ ಹಂತದ ಶೂಟಿಂಗ್ ಮುಕ್ತಾಯಗೊಳಿಸಿದೆ. ಕುಂದಾಪುರ ಸುತ್ತಮುತ್ತ ಸುಂದರ ಜಾಗದಲ್ಲಿ ಚಿತ್ರೀಕರಣ ನಡೆಸಲಾಗಿದ್ದು, ಶೀಘ್ರದಲ್ಲೇ ಚಿತ್ರತಂಡ ಸೆಕೆಂಡ್ ಶೆಡ್ಯೂಲ್ ಶೂಟಿಂಗ್ ಆರಂಭಿಸಲಿದೆ. ಅಂದಹಾಗೇ ಇದು ನಿರ್ದೇಶಕ ನಾಗರಾಜ್ ಸೋಮಯಾಜಿ ಹೊಸ ಸಿನಿಮಾ. ಈ ಹಿಂದೆ ಫ್ಯಾಮಿಲಿ ಆಡಿಯನ್ಸ್ ಗಾಗಿ ಮರ್ಯಾದೆ ಪ್ರಶ್ನೆ ಸಿನಿಮಾ ಕಥೆ ಉಣಬಡಿಸಿದ್ದ ಅವರೀಗ ದೇವಿ ಮಹಾತ್ಮೆ ಚಿತ್ರದ ಮೂಲಕ ಕಾಮಿಡಿ ಥ್ರಿಲ್ಲರ್ ಕಥೆ ಹೇಳೋದಿಕ್ಕೆ ಹೊರಟಿದ್ದಾರೆ. ಮೊದಲ ಹಂತದ ಚಿತ್ರೀಕರಣ ಮುಕ್ತಾಯಗೊಂಡಿರುವ ಬಗ್ಗೆ ಅನಿಸಿಕೆ ಹಂಚಿಕೊಂಡಿರುವ ನಾಗರಾಜ್ ಸೋಮಯಾಜಿ, "ಬಿಸಿಲಲ್ಲಿ ಕೆಲಸ ಮಾಡುವುದು ಸಾಹಸ. ಅದರಲ್ಲಿಯೂ ಕುಂದಾಪುರ ಬಿಸಿಲು ಝಳದಲ್ಲಿ ಇಡೀ ತಂಡ ಉತ್ಸಹದಿಂದ ಕೆಲಸ ಮಾಡಿದೆ. ಕಡಿಮೆ ತಾಂತ್ರಿಕ ವರ್ಗದೊಂದಿಗೆ ನಿರ್ಮಾ ಪಕರಿಗೆ ಹೊರೆಯಾಗದಂತೆ ಚಿತ್ರೀಕರಣ ನಡೆಸಲಾಗಿದೆ. ಇನ್ನೂ, ನಿರ್ಮಾಪಕ ಗಾಂಧಿ ರಾಜನ್ ಕನ್ನಡ ಸಿನಿಮಾ ಬಗ್ಗೆ ತುಂಬಾನೇ ಆಸಕ್ತಿ ಇದ್ದು, ಖುಷಿಯಿಂದ ಶೂಟಿಂಗ್ ಸೆಟ್ ಗೆ ವಿಸಿಟ್ ಹಾಕಿದ್ದರು" ಎಂದರು.



## ವೈಷ್ಣವಿ ಫಿಲಂಸ್ ಪ್ರಸ್ತುತಪಡಿಸುವ 'ಆಹನ'

ಕನ್ನಡದ ಸ್ವತಂತ್ರ ಸಂಗೀತ ಕ್ಷೇತ್ರದಲ್ಲಿ ಹೊಸ ಅಲೆ ಮೂಡಿಸುವ ಉದ್ದೇಶದಿಂದ ವೈಷ್ಣವಿ ಫಿಲಂಸ್ 'ಆಹನ' ಎಂಬ ವಿಭಿನ್ನ ಆಲ್ಬಂ ಹಾಡನ್ನು ಸಿದ್ಧಪಡಿಸಿದೆ. ಭಾವನಾತ್ಮಕ ಕಥೆ ಮತ್ತು ವಿನೂತನ ಸಂಗೀತದ ಸಮ್ಮಿಲನವೇ ಈ ಪ್ರಾಜೆಕ್ಟ್. ವಿಜಯ್‌ಲೋಹಿತ್ ನಿರ್ಮಾಣ ಹಾಗೂ ಸತೀಶ್ ಹೆಚ್ ಗೌಡ ಅವರ ಸಹ ನಿರ್ಮಾಣವಿರುವ ಈ ಆಲ್ಬಂಗೆ ರಜತ್ ಹೆಗಡೆ ಸಂಗೀತ ಸಂಯೋಜಿಸಿದ್ದಾರೆ. ಈ ಯೋಜನೆಯ ವಿಶೇಷತೆ ಎಂದರೆ, ಪ್ರತಿಭಾವಂತ ಕಲಾವಿದ ರಜತ್ ಹೆಗಡೆ ಅವರು ಈ ಹಾಡಿಗೆ ಕೇವಲ ಸಂಗೀತ ಸಂಯೋಜನೆ ಮಾಡಿರುವುದ್ದಲ್ಲದೆ, ಅವರೇ ಗಾಯಕರಾಗಿ ಧ್ವನಿ ನೀಡಿದ್ದಾರೆ. ಅಷ್ಟೇ ಅಲ್ಲದೆ, ವಿಡಿಯೋದಲ್ಲಿ ನಾಯಕ ನಟನಾಗಿ ಕಾಣಿಸಿಕೊಳ್ಳುವ ಮೂಲಕ ಈ ಭಾವನಾತ್ಮಕ ಪ್ರಯಾಣಕ್ಕೆ ಜೀವ ತುಂಬಿದ್ದಾರೆ. 'ಆಹನ' ಒಬ್ಬ ಕಲಾವಿದ ಮತ್ತು ಸಂಗೀತದ ನಡುವಿನ ಸಂಬಂಧವನ್ನು ಅನಾವರಣಗೊಳಿಸುತ್ತದೆ. "ಒಬ್ಬ ಕಲಾವಿದ ಸಂಗೀತವನ್ನು ತಲುಪಲು ಹಾತೊರೆಯುತ್ತಿರುವಾಗ, ಸಂಗೀತ ವೇ ಅವನನ್ನು ನಿರಾಕರಿಸಿದರೆ ಏನಾಗಬಹು ದು?" ಎನ್ನುವ ಪ್ರಶ್ನೆಯೇ ಈ ಹಾಡಿನ ಜೀವಾಳ.



## ರಮೇಶ್ ಅರವಿಂದ್‌ರವರ 106ನೇ ಚಿತ್ರ ದೈಜಿ

ದೈಜಿ ಚಿತ್ರದಲ್ಲಿ ನಾಯಕಿ ನಟಿಯಾಗಿ ರಾಧಿಕಾ ನಾರಾಯಣ್ ಕಾಣಿಸಿಕೊಳ್ಳುತ್ತಿದ್ದಾರೆ ಹಾಗೂ ಅನೇಕ ವಿದೇಶಿ ಕಲಾವಿದರುಗಳು ಇದರಲ್ಲಿ ನಟಿಸಿದ್ದಾರೆ. ದಿಗಂತ್‌ರವರು ಕೂಡ ಒಂದು ಮಹತ್ವವಾದ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಈ ಚಿತ್ರವನ್ನು ನಿರ್ದೇಶಿಸಿರುವವರು ಶಿವಾಜಿ ಸುರತ್ಕಲ್ 1 ಹಾಗೂ 2 ಚಿತ್ರದ ನಿರ್ದೇಶಕರಾದ ಆಕಾಶ್ ಶ್ರೀವತ್ಸ ರವರು ಹಾಗೂ ಇದರ ನಿರ್ಮಾಪಕರು ರವಿ ಕಶ್ಯಪ್‌ರವರು. ರವಿ ಕಶ್ಯಪ್‌ರವರ ಜೀವನದಲ್ಲಿ ನಡೆದ ನೈಜ ಘಟನೆಗಳನ್ನು ಆಧಾರವಾಗಿ ಇಟ್ಟುಕೊಂಡು ಅದಕ್ಕೆ ಚಿತ್ರಕಥೆ ಬರೆದು ಆಕಾಶ್ ಶ್ರೀವತ್ಸ ರವರು ಇದನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ. ಈ ಚಿತ್ರದ ಚಿತ್ರೀಕರಣವು ಸಂಪೂರ್ಣವಾಗಿದ್ದು ಪೋಸ್ಟ್ ಪ್ರೊಡಕ್ಷನ್ ಹಂತದ ವಿ. ಎಫ್.ಎಕ್ಸ್. ರೀ ರೆಕಾರ್ಡಿಂಗ್, ಕೆಲಸಗಳು ನಡೆಯುತ್ತಿದ್ದು ಇನ್ನೇನು ಕೆಲವೇ ತಿಂಗಳುಗಳಲ್ಲಿ ತೆರೆಗೆ ಬರಲಿದ್ದು, ಪೋಸ್ಟ್ ಪ್ರೊಡಕ್ಷನ್ ಹಂತದ ಕೆಲಸಗಳು ಮುಗಿಯುತ್ತಿದ್ದಂತೆ ಚಿತ್ರದ ಬಿಡುಗಡೆ ದಿನಾಂಕವನ್ನು ಚಿತ್ರತಂಡ ಬಹಿರಂಗ ಪಡಿಸಲಿದ್ದಾರೆ.


















KARAVALI THARANGINI Weekly Owned, Editor, Published & Printed by Lalithasri Preetham Rai No.2-64/54(12), Pushparaj Nilaya, Jayanagara, 3rd 'A' Maroli Village, Dakshina Kannada, Karnataka - 575005.
email: karavalitharangini@gmail.com, web: karavalitharangini.com ph: 9880109212 Printed at Bhima Samskruthi Printers & Publishers, No 1182 14th Main Road Prakash Nagar, Bengaluru Karnataka-560021